MYSORE SEED FORM BILL, 1973

Motion to Consider

MADAM SPEAKER.—ಅದನ್ನೂ ತೆಗದುಕೊಳ್ಳೋಣ. I have received the recommendation from the Governor under article 273 of the Constitution that the Mysore Seed Farms Bill. 1973 be considered by the Legislative Assembly. The Hon. Minister may move the motion for consideration of the Bill.

Sri K. H. PATIL (Minister for Agriculture and Forests). I beg to move.

"That the Mysore Seed Farms Bill, 1973 be taken into consideration."

MADAM SPEAKER.—Motion moved :

' That the Mysore Seed Farms Bill, 1973 be taken into consideration."

†ಶ್ರೀ ಕೆ. ಎಚ್. ಪಾಟೀಲ್.— ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈ ಬಿಲ್ಲಿನ ವಿಷಯವಾಗಿ ಬಹಳಷ್ಟು ಹೇಳಬೇಕಾದುದಿಲ್ಲ. ರಾಜ್ಯದಲ್ಲಿ ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್ ಉತ್ತಮವಾದ ಬೀಜದ ತಳಿ ಉತ್ಪಾದನೆ ಮಾಡುವ ಸಲುವಾಗಿ ಸೀಡ್ ಫಾರಂಗಳನ್ನು ಎಲ್ಲಾ ಕಡೆಗೂ ತೆಗೆಯಬೇಕು ಎನ್ನುವುದು ಈ ಬಿಲ್ಲಿನ ಉದ್ದೇಶವಾಗಿದೆ ಸೀಡ್ ಫಾರಂ ತೆಗೆಯುವ ಸಲುವಾಗಿ ಸರ್ಕಾರದ ನಿಯಂತ್ರಣ ಇಟ್ಟುಕೊಂಡು ಎಲ್ಲೆಲ್ಲಿ ಸೀಡ್ ಫಾರಂ ತೆಗೆಯಬೇಕು, ಅವುಗಳ ಸುತ್ತಮುತ್ತ ಸಹ ಯಾವ ಯಾವ ಕ್ಷೇತ್ರಗಳಲ್ಲಿ ಬೀಜಗಳನ್ನು ಸುಧಾರಿಸಿದ ಪದ್ಧತಿಯಲ್ಲಿ ಬೆಳಸಲಿಕ್ಕೆ ಅನುಕೂಲ ವಾತಾವರಣ ನಿರ್ಮಾಣ ಮಾಡಬೇಕು ಎನ್ನುವ ಬಗ್ಗೆ ಇದೆ. ಇದಕ್ಕೆ ವಿರೋಧವಾಗಿ ವರ್ತಿಸುವ ಕೃಷಿಗಾರರ ಬಗ್ಗೆ ಶಾಸನ ಮಾಡಬೇಕು ಎಂದು ಇದೆ. ನಿಜವಾಗಿ ರೈತನ ಹಿತದೃಷ್ಟಿಯಿಂದ ಉತ್ತಮವಾದ ಬೀಜದ ತಳಿಯನ್ನು ಉತ್ಪಾದನೆ ಮಾಡುವ ದೃಷ್ಟಿಯಲ್ಲಿ ಈ ಬಿಲ್ಲನ್ನು ತಂದಿದ್ದೇನೆ. ಇಲ್ಲಿಯವರೆಗೆ ಬೇರೆ ರಾಜ್ಯಗಳನ್ನು, ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನನ್ನು ಬೀಜದ ಸಲುವಾಗಿ ಅವಲಂಬನೆ ಮಾಡಬೇಕಾಗಿತ್ತು. ಹೊಸದಾಗಿ ನಮ್ಮ ರಾಜ್ಯದಲ್ಲಿ ಸೀಡ್ ಫಾರಂಗಳನ್ನು ಮಾಡಿ ಅವುಗಳ ಮುಖಾಂತರ ನಮಗೆ ಬೇಕಾಗುವ ಹೈಬ್ರಿಡ್ ಮತ್ತು ಸುಧಾರಿತ ಬೀಜಗಳನ್ನು ಉತ್ಪಾದನೆ ಮಾಡುವ ಮುಸೂದೆ ಇರುವುದರಿಂದ ಸರ್ವ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ — ಯಾವ ಯಾವ ಬೀಜಗಳನ್ನು ಉತ್ಪಾದನೆ ಮಾಡುತ್ತೀರಿ ? ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟದ್ದೇ ಅಥವಾ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟದ್ದೇ ?

ಶ್ರೀ ಕೆ. ಎಚ್. ಪಾಟೀಲ್.— ಹಾರ್ಟಿಕಲ್ಚರ್‌ಗೆಸಂಬಂಧಪಟ್ಟಿದ್ದು. ಇದರಲ್ಲಿ ಕಾಯಿಪಲ್ಲೆ, ತೆಂಗು ಅಡಿಕೆ ಬರುತ್ತದೆ. ಡೈರಕ್ಟರ್ ಮೀನ್ಸ್ ಡೈರಕ್ಟರ್ ಆಫ್ ಹಾರ್ಟಿಕಲ್ಚರ್ ಎಂದು ಇರುತ್ತದೆ ಹಾರ್ಟಿಕಲ್ಚರಲ್‌ಗೆ ಸಂಬಂಧಿಸಿದ ಸೀಡ್ ಫಾರಂನ್ನು ತರಲಿಕ್ಕೆ ಈ ಬಿಲ್ ತರಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಈ ಬೀಜದ ಫಾರಮ್ಮಿನ ಬೆಳೆಗೆ ಸಂಬಂಧಪಟ್ಟ ಬಿಲ್ಲನ್ನು ತೀವ್ರವಾಗಿ ನಾನು ವಿರೋಧಮಾಡಬೇಕಾಗಿದೆ. ಕಾರಣವೇನೆಂದರೆ, ಕೃಷಿ ಸಚಿವರಾದ ಶ್ರೀ ಕೆ. ಎಚ್. ಪಾಟೀಲರು ಒಂದು ಮಹತ್ವ ಪೂರ್ಣವಾದ ಮಸೂದೆಯನ್ನು ತಂದಿದ್ದಾರೆ. ಅವರ ದೃಷ್ಟಿಕೋನ ಏನಾಗಿದೆಯೆಂದರೆ, ಇಂತಹ ಬೀಜಗಳನ್ನು ಸರ್ಕಾರ ಮಾತ್ರ ಬೆಳೆಯಬೇಕು, ಸರ್ಕಾರ ಎಲ್ಲೆಲ್ಲಿ ಫಾರ್ಮ್‌ಗಳನ್ನು ಮಾಡಿರುತ್ತದೆ, ಅಂಥಾ ಕಡೆ, ಇನ್ನು ಯಾರೂ ಬೆಳೆಯಬಾರದು ಎಂದು ನಿಷೇಧ ಹಾಕುವುದೇ ಇದರ ಮುಖ್ಯ ಉದ್ದೇಶವಾಗಿದೆ. ಇವತ್ತು ಬೀಜದ ಫಾರ್ಮ್‌ನ ಸಾಕಷ್ಟು ಪ್ರಮಾಣದಲ್ಲಿ ಸರ್ಕಾರ ಸ್ಥಾಪನೆ ಮಾಡಿ ಅಲ್ಲಿಂದ ಬೀಜ ಉತ್ಪಾದನೆ ಮಾಡುವ ಪ್ರದೇಶ ಮಾತ್ರ ಇವೆ, ಇಷ್ಟು ಮಾತ್ರಕ್ಕೆ ಇರತಕ್ಕ ಬೀಜೋತ್ಪಾದನೆ ಕ್ಷೇತ್ರಗಳಿಂದ ರಾಜ್ಯಕ್ಕೆ ಬೇಕಾದ ಎಲ್ಲಾ ಬೀಜ ಉತ್ಪಾದನೆ ಮಾಡಿ, ರೈತನಿಗೆ, ಕೃಷಿ ವ್ಯವಸಾಯಗಾರನಿಗೆ ಬೇಕಾದಂಥ ಬೀಜಗಳನ್ನು ಸರಬರಾಜು ಮಾಡುವ ಸ್ಥಿತಿ ಸರ್ಕಾರಕ್ಕೆ ಇಲ್ಲ. ಆ ದೃಷ್ಟಿಯಿಂದ ಏನಾದರೂ ಸರ್ಕಾರ ಸರಬರಾಜು ಮಾಡತಕ್ಕ ಬೀಜದಿಂದಲೇ ವ್ಯವಸಾಯಗಾರ ಅವಲಂಬಿಸಿದ್ದಾನೆ ಎಂದು ತಿಳಿದುಕೊಂಡಿದ್ದರೆ ಅದು ಸುಳ್ಳು. ಅವನು ಸ್ವತಃ ಬೆಳೆಸಿ, ಸ್ವತಃ ಉತ್ಪನ್ನ ಮಾಡುವ ಬೀಜದಿಂದ ಅನೇಕ ಕೃಷಿ ಕ್ಷೇತ್ರಗಳನ್ನು ಉತ್ತಮಪಡಿಸಿದ್ದಾರೆ. ಇವತ್ತು ಅನೇಕ ಸಾರಿ ನಮ್ಮ ಪ್ರಚಾರ ದಿಂದ, ಹಸಿರು ಕ್ರಾಂತಿ ಹೆಸರಿನಲ್ಲಿ ನಡೆದಂಥ ಪ್ರಚಾರದಿಂದ ಅನೇಕ ಜನ ಉತ್ತಮ ವಾದ ಕ್ಷೇತ್ರವನ್ನು ಬೆಳೆಸಿದ್ದಾರೆ.

ಇದು ತೋಟಗಾರಿಕೆ ಕ್ಷೇತ್ರ ಆಗಿರಬಹುದು, ಅಥವಾ ಬೇರೆ ಆಹಾರ ಪದಾರ್ಥ ಗಳನ್ನು ಬೆಳೆಯತಕ್ಕಂಥ ಕ್ಷೇತ್ರ ಆಗಿರಬಹುದು. ಇದರಲ್ಲಿ ಉತ್ತಮವಾದ ಕೃಷಿ ಗಾರರು ಇದ್ದಾರೆ. ಆದರೆ ಸರ್ಕಾರ ಉತ್ತಮವಾದ ಬೀಜವನ್ನು ಮಾಡುವುದಕ್ಕೆ ಸೀಡ್ ಫಾರಂ ಮಾಡಬೇಕು ಎನ್ನುವ ಒಂದು ನಿರೀಕ್ಷಣೆ ಏನು ಇಟ್ಟುಕೊಂಡಿದ್ದರೋ ಅಷ್ಟೇ ಪ್ರಮಾಣದಲ್ಲಿ ಅಷ್ಟೇ ಪ್ರಾಮಾಣಿಕವಾಗಿ, ಅಷ್ಟೇ ಬುದ್ಧಿವಂತರಾಗಿ, ಅಷ್ಟೇ ತಿಳುವಳಿಕೆ ಉಳ್ಳವರಾಗಿ ಇಂತಹ ಬೀಜವನ್ನು ಉತ್ಪಾದನೆ ಮಾಡತಕ್ಕಂಥ ಸಾಹಸ ನಮ್ಮ ರಾಜ್ಯದ ಕೃಷಿಗಾರರು ಪಡೆದಿದ್ದಾರೆ. ಈವೊತ್ತಿನ ದಿವಸ ನಮ್ಮ ಸರ್ಕಾರದ ವಶದಲ್ಲಿರತಕ್ಕಂಥ ಗ್ರಾಮಸೇವಕರು ಏನು ಇದ್ದಾರೋ ಅವರು ಗ್ರಾಮಾಂತರದಲ್ಲಿ ಕೆಲಸ ಮಾಡಿ ಕೃಷಿಯಲ್ಲಿ ಹೆಚ್ಚು ನೈಪುಣ್ಯತೆ ಪಡೆದಿದ್ದರೂ ಸಹ ಅವರೆಲ್ಲರಿಗಿಂತಲೂ ಹೆಚ್ಚಾಗಿ ನಮ್ಮ ರಾಜ್ಯದಲ್ಲಿರುವ ಕೃಷಿಗಾರರು ಅಂದರೆ ವ್ಯವಸಾಯಗಾರರು ಮನಸ್ಸು ಮಾಡಿದರೆ ಸರ್ಕಾರದವರು ಬೆಳೆಸುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಉತ್ತಮ ವಾದ ಬೀಜವನ್ನು ಅವರು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ, ಅವರಿಗೆ ಅಷ್ಟು

ಅನುಭವ ಇದೆ ಮೇಲಾಗಿ ಅವರಿಗೆ ಭೂಮಿ ಇದೆ. ಈಗ ಈ ಮಸೂದೆಯಿಂದ ಏನಾಗಿದೆ ಎಂದರೆ ನಮ್ಮ ಜನರಿಗೆ ಇರತಕ್ಕಂಥ ಉತ್ಪಾದನಾ ಸಾಮರ್ಥ್ಯವನ್ನು ಹತ್ತಿಕ್ಕುವುದಕ್ಕೆ ಕಾರಣವಾಗಿದೆಯೇ ಹೊರತು ಮತ್ತಾವುದಕ್ಕೂ ಪ್ರಯೋಜನವಾಗಿಲ್ಲ. ಆದುದರಿಂದ ನಮ್ಮ ರಾಜ್ಯದ ವ್ಯವಸಾಯಗಾರರ ದೃಷ್ಟಿಯಿಂದ ಈ ಮಸೂದೆಯನ್ನು ಪ್ರಭಲವಾಗಿ ವಿರೋಧ ಮಾಡುತ್ತೇನೆ.

ಇನ್ನು ಈ ಮಸೂದೆಯಲ್ಲಿ ತಾವು ಏನು ಉದ್ದೇಶ ಪಟ್ಟಿದ್ದೀರಿ ಎನ್ನುವುದನ್ನು ಹೇಳುತ್ತೇನೆ. ಒಂದು ಕೃಷಿ ಬೀಜದ ಉತ್ಪಾದನೆ ಆ ಕ್ಷೇತ್ರದಲ್ಲಿ ಇದ್ದರೆ ಆ ಕ್ಷೇತ್ರಕ್ಕೆ ತಾವು ಒಂದು ನೊಟಿಫಿಕೇಷನ್ ಹೊರಡಿಸಿದರೆ, ಆ ಕ್ಷೇತ್ರದಲ್ಲಿ ಬೇರೆಯವರು ಯಾರೆ ಆಗಲೀ ಅಥವಾ ಅದರ ಸುತ್ತಮುತ್ತಲಿನ ಪ್ರದೇಶದವರಾಗಲಿ ಆ ಗ್ರಾಮದಲ್ಲಿ ಯಾರೂ ಕೂಡ ಈ ಉತ್ಪಾದನಾ ಬೀಜವನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲಾ ಅದೇ ಗ್ರಾಮದಲ್ಲಿ ಯಾವ ಬೀಜವನ್ನು ಉತ್ಪಾದನೆ ಮಾಡಬೇಕು ಎಂದು ಒಂದು ಫಾರಂ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದರೆ ಅಷ್ಟೇ ಪ್ರಮಾಣದಲ್ಲಿ ಒಬ್ಬ ಖಾಸಗೀ ಮನುಷ್ಯ ಈ ಬೀಜವನ್ನು ಬೆಳೆಸುವುದಕ್ಕೆ ಆಗುವುದಿಲ್ಲ ಅನ್ನುವುದಕ್ಕೆ ಇವರು ಯಾರು? ಈ ರೀತಿಯಾಗಿ ಸ್ವಾತಂತ್ರ್ಯಹರಣ ಮಾಡುವುದಕ್ಕೆ ಇವರು ಯಾರು? ಅದು ಹಣ್ಣು ಹಂಪಲು ಕ್ಷೇತ್ರವೇ ಆಗಿರಬಹುದು ಅಥವಾ ಬೇರೆ ಯಾವುದೇ ಕ್ಷೇತ್ರವಾಗಿರಬಹುದು. ಆದರೆ ಅವನು ತನ್ನ ಸ್ವಯಂ ಪ್ರೇರಣೆಯಿಂದಾಗಲಿ ಅಥವಾ ತನ್ನ ಬುದ್ಧಿಯಿಂದಾಗಲಿ ಉತ್ತಮವಾದ ಬೀಜವನ್ನು ಮಾಡುವುದಕ್ಕೆ ಸಾಧ್ಯತೆ ಇರುವುದಾದರೆ ಆ ಸಾಧ್ಯತೆಯನ್ನು ಅವನಿಗೆ ಏತಕ್ಕೆ ಕೊಡಬಾರದು? ಈ ಮಸೂದೆಯಿಂದ ಏನು ಗೊತ್ತಾಗುತ್ತದೆ ಎಂದರೆ ಅವನಿಗೆ ಇರತಕ್ಕಂಥ ಬುದ್ಧಿಯನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಅಷ್ಟೆ. ಹಲವಾರು ವಿಧದಲ್ಲಿ ವಿಜ್ಞಾನಿಗಳು ಪಾಂಡಿತ್ಯವನ್ನು ಪಡೆದುಕೊಂಡು ಬಂದಿರುತ್ತಾರೆ. ಅವರು ಆ ವಿಜ್ಞಾನದಲ್ಲಿ ತಮ್ಮ ಮುಂದಿನ ಕಾರ್ಯಾಚರಣೆಯನ್ನು ಪರಿಶೋಧನೆ ಮಾಡುವುದು ಬೇಡ, ಆ ಬಗ್ಗೆ ಸಂಶೋಧನೆ ಮಾಡುವುದು ಬೇಡ ಅನ್ನುವುದಾದರೆ ಇದಕ್ಕಿಂತ ಹಾನಿ ಇನ್ನಾವುದೂ ಇಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ ನೂರಕ್ಕೆ ೮೦ರಷ್ಟು ಜನ ವ್ಯವಸಾಯಗಾರರು ಇದ್ದಾರೆ. ಈ ರೀತಿ ಆದರೆ ಅವರು ತಮಗೆ ಬೇಕಾದಷ್ಟು ಆಹಾರ ಧಾನ್ಯವನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲದಾಗುತ್ತದೆ. ಈವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ನೂರಕ್ಕೆ ೮೦ರಷ್ಟು ಜನ ವ್ಯವಸಾಯಗಾರರು ಇದ್ದರೂ ಕೂಡ ಈವೊತ್ತಿನ ಆಹಾರದ ಪರಿಸ್ಥಿತಿಯಲ್ಲಿ ಎಷ್ಟು ಆಹಾರ ಕೊರತೆ ಇದೆ ಎನ್ನುವ ಒಂದು ದೊಡ್ಡ ಕಠಿಣ ಪರಿಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ಇಂತಹ ಒಂದು ಸಂದರ್ಭ ಈವೊತ್ತಿನ ದಿವಸ ಇರುವಾಗ ನಮ್ಮ ರಾಜ್ಯದ ವ್ಯವಸಾಯಗಾರರಿಗೆ ಒಂದು ಹೆಚ್ಚಿನ ಉತ್ತೇಜನ ಕೊಡಬೇಕಾದುದು ನ್ಯಾಯ. ವ್ಯವಸಾಯಗಾರರಿಗೆ ಇರತಕ್ಕಂಥ ಪಾಂಡಿತ್ಯವನ್ನು ವಿಸ್ತಾರ ಮಾಡುವ ಬದಲು ಈ ಮಸೂದೆ ಮುಖಾಂತರ ಅವರಿಗೆ ಒಂದು ಕಂದಕ

ವನ್ನು ಇಡುವುದಕ್ಕೆ ಹೋಟಿದ್ದೀರಿ. ಇದರಿಂದ ನಮ್ಮ ರಾಜ್ಯದಲ್ಲಿ ಯಾವ ವ್ಯವಸಾಯಗಾರನೂ ಕೂಡ ಬುದ್ಧಿವಂತನಾಗುವುದಕ್ಕೆ ಸಾಧ್ಯವಿಲ್ಲಾ. ಈಗ ತಾವು ಕೃಷಿ ವಿಶ್ವವಿದ್ಯಾನಿಲಯವನ್ನು ನಮ್ಮ ರಾಜ್ಯದಲ್ಲಿ ಇನ್ನೊಂದನ್ನು ಮಾಡಬೇಕು ಎಂದು ಹೊಸದಾಗಿ ಸ್ಥಾಪನೆ ಮಾಡುವುದಕ್ಕೆ ಒಂದು ಮಸೂದೆಯನ್ನು ತಂದಿದ್ದೀರಿ. ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಈ ಕೃಷಿ ವಿಶ್ವವಿದ್ಯಾನಿಲಯಗಳು ವ್ಯಾಪಕವಾಗಿ ಕೆಲಸ ಮಾಡಬೇಕು, ಈ ಕೃಷಿ ವಿಶ್ವವಿದ್ಯಾನಿಲಯದ ಸೇವೆ ಎಲ್ಲಾ ಭಾಗದವರಿಗೂ ಸಿಗಬೇಕು, ಆದುದುದರಿಂದ ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆ. ಪರಿಸ್ಥಿತಿ ಹೀಗಿರುವಾಗ ಈ ವ್ಯವಸಾಯವನ್ನು ಉತ್ತಮ ಪಡಿಸುವುದಕ್ಕೆ ಏನು ಪ್ರಚಾರ, ಸಾಹಿತ್ಯಗಳು ಬೇಕೋ ಅದನ್ನು ಮಾಡಬೇಕೇ ಹೊರತು ಈ ಮಸೂದೆ ಮುಖಾಂತರ ವ್ಯವಸಾಯಗಾರನಿಗೆ ಕಂದಕವನ್ನು ಉಂಟು ಮಾಡುವುದಕ್ಕೆ ಹೋಗಬಾರದು. ಆದುದರಿಂದ ಇದನ್ನು ಕಂಡಿಯಲ್ಲಿರುವಾಗಲೇ ಜಿಗುಟಿ ಹಾಕಬೇಕೇ ವಿನಾ ಅದನ್ನು ದೊಡ್ಡದಾಗಿ ಬೆಳೆಸುವುದಕ್ಕೆ ಹೋಗಬಾರದು. ಆದುದರಿಂದ ವ್ಯವಸಾಯಗಾರನು ಉತ್ತಮವಾದ ಬೀಜವನು ಬೆಳೆಯುವುದಕ್ಕೆ ಪ್ರಯತ್ನ ಪಟ್ಟರೆ ಅವನಿಗೆ ಇದರಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರಬೇಕೇ ವಿನಾ ಅದನ್ನು ಮೊಟಕು ಮಾಡುವುದಕ್ಕೆ ಯಾವುದೇ ಸರ್ಕಾರವಾಗಲಿ, ಯಾವುದೇ ಸಮಾಜವಾಗಲಿ ಹೋಗಬಾರದು. ಮಾನ್ಯ ಅಧ್ಯಕ್ಷರೇ ವ್ಯವಸಾಯಗಾರನ ಮೂಲಭೂತ ಹಕ್ಕುಗಳಿಗೆ ಒಂದು ದೊಡ್ಡ ಕೊಡಲಿ ಏಟನ್ನು ಈ ಮಸೂದೆ ಮುಖಾಂತರ ಹಾಕುವುದರಿಂದ ಈ ಮಸೂದೆಯನ್ನು ತಾವು ವಾಪಸ್ಸು ಪಡೆಯಬೇಕು ಎಂದು ಹೇಳುತ್ತೇನೆ.

ಇನ್ನು ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಈವೊತ್ತಿನ ದಿವಸ ಶ್ರೀಮಾನ್ ಹೆಚ್.ಎಂ. ಚೆನ್ನಬಸಪ್ಪನವರು ಒಳ್ಳೆಯ ಉತ್ತಮ ವ್ಯವಸಾಯಗಾರರಾಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಶ್ರೀಮಾನ್ ಚನ್ನಬಸಪ್ಪನವರಿಗೆ ಆಗದೇ ಇರಕ್ಕಂಥ ಒಬ್ಬ ಮಂತ್ರಿಗಳು ಇದ್ದರೆ ಅಥವಾ ರಾಜಕಾರಣಿಗಳು ಇದ್ದರೆ ಅವರಿಗೆ ಜಮೀನು ಇರತಕ್ಕಂಥ ಕಡೆಯಲ್ಲಿಯೇ ಈ ಒಂದು ಸೀಡ ಫಾರಂವನ್ನು ಹಾಕುವುದು, ಶ್ರೀಮಾನ್ ಚನ್ನಬಸಪ್ಪನವರು ಮಾಡತಕ್ಕಂಥ ಬೀಜದ ಉತ್ಪಾದನೆ ನಿಲ್ಲಿಸಬೇಕು. ಅವನ್ನು ತುಳಿಯಬೇಕು ಎಂದು ಸರ್ಕಾರದ ಪ್ರಚೋದನೆ ಇದ್ದರೆ ಸರ್ಕಾರದ ಪ್ರಭಾವದಿಂದ ಅವರ ಹತ್ತಿರದ ಪ್ರದೇಶದಲ್ಲೇ ಒಂದು ಬೀಜದ ಉತ್ಪಾದನಾ ಕ್ಷೇತ್ರ ಸ್ಥಾಪನೆ ಮಾಡಿದರೆ ಉತ್ತಮ ಕೃಷಿಗಾರರಾದ ಶ್ರೀಮಾನ್ ಚೆನ್ನಬಸಪ್ಪನವರಂಥವರಿಗೆ, ಅವರು ಮಾಡಿದ ಹಾಗೆ ಉತ್ತಮವಾದ ಬೀಜವನ್ನು ಉತ್ಪಾದನೆ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲಾ. ಈವತ್ತಿನ ದಿವಸ ರಾಜಕಾರಣಿಗಳು ಯಾವ ರೀತಿ ಮುಂದುವರೆದಿದ್ದಾರೆ ಎನ್ನುವುದನ್ನು ನಾವು ನೋಡುತ್ತಾ ಇದ್ದೇವೆ. ಇಂಥಾ ಸನ್ನಿವೇಶದಲ್ಲಿ ಬಹಳ ಜಾಗ್ರತೆ ಇಲ್ಲದೇ ಹೋದರೆ ಯಾರು ಉತ್ತಮವಾದ ಕೃಷಿಗಾರರು ಇದ್ದಾರೆ ಅವರು ಮಾಡಬೇಕಾದಂಥ ಕೆಲಸಕ್ಕೆ

ಒಂದು ದೊಡ್ಡ ಆತಂಕ ಉಂಟಾಗುತ್ತದೆ. ಇದನ್ನು ತಾವು ದೂರದೃಷ್ಟಿಯಿಂದ ಆಲೋಚನೆ ಮಾಡಬೇಕು. ಈ ದೃಷ್ಟಿಯಿಂದ ಈ ಅಧಿಕಾರವನ್ನು ಸರಕಾರದ ಯಂತ್ರಕ್ಕೆ ಕೊಡುವುದಾದರೆ ಅನೇಕ ಖಾಸಗೀ ಕೃಷಿಗಾರರ ಮೇಲೆ ಅನ್ಯಾಯ ಎಸಗುವುದಲ್ಲದೆ ಅವರ ಬೆಳವಣಿಗೆಗೂ ಕೂಡ ಒಂದು ಆತಂಕವುಂಟಾಗುತ್ತದೆ. ವ್ಯವಸಾಯಗಾರರಿಗೆ ಇರತಕ್ಕಂಥ ಅಧಿಕಾರವನ್ನು ಹರಣ ಮಾಡುವುದಕ್ಕೆ ಹೋಗ ಬಾರದು. ಇದು ತಾವು ದೀರ್ಘವಾಗಿ ಯೋಚನೆ ಮಾಡಿ. ಇದು ರೈತರ ಸ್ವಾತಂತ್ರ್ಯದ ಹರಣದ ವಿಧೇಯಕವಾಗುತ್ತದೆ. ಆದುದರಿಂದ ಕೃಷಿ ಸಚಿವರು ಈ ಮಸೂದೆ ಯನ್ನು ಆತುರಾತುರವಾಗಿ ತರತಕ್ಕಂಥಾ ಮಸೂದೆ ಅಲ್ಲ. ಇನ್ನೂ ೧೦ ವರ್ಷ ಆದಮೇಲೆ ತಂದಿದ್ದರೆ ಚೆನ್ನಾಗಿರುತ್ತದೆ. ಏತಕ್ಕೆಂದರೆ ಈಗ ವ್ಯವಸಾಯಗಾರ ಇನ್ನೂ ಬೆಳವಣಿಗೆ ಆಗಬೇಕಾದ್ದು ಇದೆ. ಆದುದರಿಂದ ಇದನ್ನು ಹಂತಹಂತವಾಗಿ ತರುವುದಕ್ಕೆ ಈಗಾಗಲೇ ಕಾನೂನು ತರುವುದಾದರೆ ವ್ಯವಸಾಯಗಾರನು ಇದನ್ನು ಯಾವರೀತಿಯಲ್ಲೂ ತನ್ನ ಕ್ಷೇತ್ರವನ್ನು ವಿಸ್ತಾರ ಮಾಡುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ಈ ಮಸೂದೆಯನ್ನು ವಾಪಸ್ಸು ಪಡೆಯಬೇಕು ಎಂದು ತಮ್ಮನ್ನು ಕೇಳಿ ಕೊಳ್ಳುತ್ತೇನೆ.

ಇನ್ನು ಈ ಬಗ್ಗೆ ಇನ್ನೊಂದು ವಿಷಯ ಹೇಳುವುದಾದರೆ ಅಧ್ಯಕ್ಷರೇ ತಾವು ನೋಡಿದ ಹಾಗೆ ಮತ್ತು ಇದು ನಮ್ಮೆಲ್ಲರ ಅನುಭವಕ್ಕೆ ಬಂದ ಪ್ರಕಾರ ಸರಕಾರದ ಕ್ಷೇತ್ರದಲ್ಲಿ ನಡೆಯುತ್ತಾ ಇರತಕ್ಕಂಥ ಬೀಜದ ಉತ್ಪಾದನಾ ಕ್ಷೇತ್ರ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎನ್ನುವುದನ್ನು ನೋಡಿದ್ದೇವೆ. ಸರಕಾರದ ಯಂತ್ರ ಎಷ್ಟರ ಮಟ್ಟಿಗೆ ತೂಕಡಿಕೆ ಹಾಕಿಕೊಂಡು ನಡೆಯುತ್ತಾ ಇದೆ ಎನ್ನುವುದನ್ನು ನೋಡಿದ್ದೇವೆ. ಅದೇ ರೀತಿ ಈ ಸರಕಾರದ ಬೀಜದ ಉತ್ಪಾದನಾ ಕ್ಷೇತ್ರವೂ ಕೂಡ ನಡೆಯುತ್ತದೆ. ಈ ಕ್ಷೇತ್ರದಲ್ಲಿ ವ್ಯವಸಾಯಗಾರನಿಗೆ ಸಾಕಷ್ಟು ಪ್ರಮಾಣದಲ್ಲಿ ಉತ್ತಮವಾದ ಬೀಜವನ್ನು ಒದಗಿಸುವುದಕ್ಕಾಗುವುದಿಲ್ಲ. ಒಂದು ವೇಳೆ ಒದಗಿಸಿದರೂ ಕೂಡ ಅದನ್ನೇ ನಂಬಿ ಯಾವ ವ್ಯವಸಾಯಗಾರರೂ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಸರಕಾರ ಒದಗಿಸಿದಂಥ ಬೀಜವನ್ನೇ ತೆಗೆದುಕೊಳ್ಳಿ ಅಥವಾ ಗೊಬ್ಬರವನ್ನೇ ತೆಗೆದು ಕೊಳ್ಳಿ. ಆದರಿಂದ ಯಾವ ರೀತಿ ತೊಂದರೆಗಳು ಬರುತ್ತವೆ ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ಒಬ್ಬ ಕೃಷಿ ವ್ಯವಸಾಯಗಾರನಿಂದಾಗಲಿ ಅಥವಾ ಒಬ್ಬ ಖಾಸಗೀ ಮನುಷ್ಯನಿಂದಾಗಲಿ ಬೀಜವನ್ನು ತೆಗೆದುಕೊಂಡರೆ ಯಾವ ರೀತಿಯೂ ತೊಂದರೆ ಬರುವುದಿಲ್ಲ. ಕಾರಣ ಅವನು ಉತ್ತಮವಾದ ಬೀಜವನ್ನು ಉತ್ಪಾದನೆ ಮಾಡಿದರೆ ಯಾವ ದೃಷ್ಟಿಯಿಂದ ಉತ್ಪಾದನೆ ಮಾಡುತ್ತಾನೆ ಎಂದರೆ ತನ್ನ ಹತ್ತಿರ ತೆಗೆದು ಕೊಂಡು ಹೋಗುವ ಗಿರಾಕಿ ತನ್ನಲ್ಲಿಗೆ ಮತ್ತೆ ಬರಬೇಕು. ಅದರಿಂದ ಹೆಚ್ಚು ಉತ್ತಮವಾದ ಫಸಲು ಸಿಗುವಂತಾಗಬೇಕು ಎನ್ನುವ ದೃಷ್ಟಿಯಿಂದ ಉತ್ತಮವಾದ ಬೀಜವನ್ನು ತಯಾರು ಮಾಡುತ್ತಾನೆ. ಆದರೆ ಸರಕಾರದ ಯಂತ್ರವನ್ನು ನೋಡಿ ದರೆ ಅವರು ಉತ್ಪಾದನೆ ಮಾಡಿದಂಥ ಬೀಜವನ್ನು ವಿತರಣೆ ಮಾಡುವ ಬಗೆ

ಹೇಗೆಂದರೆ ಯಾವ ಜನ ತೆಗೆದುಕೊಂಡು ಹೋದರೆಷ್ಟು, ಬಿಟ್ಟರೆಷ್ಟು, ಯಾವ ಗಿರಾಕಿ ಬಂದರೆಷ್ಟು, ಹೋದರೆಷ್ಟು. ಉತ್ತಮವಾದ ಫಸಲು ಬಂದರೆಷ್ಟು, ಬಿಟ್ಟರೆಷ್ಟು, ನನಗೆ ೧೨ ತಿಂಗಳು ಸಂಬಳ ಬರುತ್ತದೆಯಲ್ಲಾ ಎನ್ನುವುದನ್ನು ಆಲೋಚನೆ ಮಾಡುತ್ತಾನೆ. ಸರಕಾರದ ವಿತರಣೆ ವ್ಯವಸ್ಥೆ ಸರಿಯಾಗಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಒಬ್ಬ ಖಾಸಗೀ ಮನುಷ್ಯ ತನ್ನ ಕ್ಷೇತ್ರದಲ್ಲಿ ಎಷ್ಟು ಪ್ರಮಾಣದಲ್ಲಿ ಉತ್ತಮವಾದ ಬೀಜವನ್ನು ಬೆಳೆದು ಹಂಚುತ್ತಾನೊ ಅಷ್ಟೇ ಪ್ರಮಾಣದಲ್ಲಿ ಸರಕಾರದ ಯಂತ್ರ ಕೆಲಸ ಮಾಡುತ್ತಿದೆಯೇ ಎನ್ನುವುದನ್ನು ನಾವು ಪ್ರತಿನಿತ್ಯ ನೋಡುತ್ತಾ ಇದ್ದೇವೆ. ಸರಕಾರದ ಯಂತ್ರದಿಂದ ಬೀಜವನ್ನು ಹಂಚುವ ವ್ಯವಸ್ಥೆಯಾಗಲಿ, ಗೊಬ್ಬರದ ಹಂಚಿಕೆಯ ವ್ಯವಸ್ಥೆಯಾಗಲಿ, ವ್ಯವಸಾಯಗಾರರಿಗೆ ಸಾಲ ಕೊಡುವ ವ್ಯವಸ್ಥೆಯಾಗಲಿ ಯಾವ ರೀತಿ ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಈ ದೃಷ್ಟಿಯಿಂದ ನೋಡಿದರೆ ಯಾವವಿಷಯದಲ್ಲೂ ಕೂಡ ತೆಗೆದುಕೊಂಡರೆ ಸರಕಾರದ ಯಂತ್ರದಿಂದ ಈ ವ್ಯವಸಾಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಿಲ್ಲಾ. ಆದುದರಿಂದ ನೀವು ಈ ಒಂದು ಕಾನೂನು ಮಾಡಿ ಅಕ್ಕಪಕ್ಕದ ಜನರಿಗೂ ಕೊಡುತ್ತೇವೆ ಎಂದರೆ ವ್ಯವಸಾಯಗಾರನ ಒಂದು ಹಿತಕ್ಕೆ ಒಂದು ಕುಂದುಕ ಇಟ್ಟಂತಾಗುತ್ತದೆ. ಆ ರೀತಿ ಮಾಡಬೇಡಿ. ಈ ಮಸೂದೆಯಿಂದ ತಕ್ಕ ಬಂದೋಬಸ್ತು ಏರ್ಪಾಡು ಮಾಡುತ್ತೇವೆ ಎಂದು ಈ ಒಂದು ಕಾನೂನನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

2–30 P. M.

ಈಗ ನೀವು ಮಾಡುತ್ತಿರುವುದು ಎಷ್ಟರಮಟ್ಟಿಗೆ ನ್ಯಾಯ ಎಂದು ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತವೆ. ವ್ಯವಸಾಯ ಕ್ಷೇತ್ರ ಎಲ್ಲೆಲ್ಲಿ ಇದೆಯೋ ಆ ಕಾರ್ಯ ಕ್ಷೇತ್ರವನ್ನು ಕುಂಠಿತವಾಗುವಂತೆ ಮಾಡಲು ಯಾರೂ ಪ್ರಯತ್ನ ಮಾಡಬಾರದು. ಮಾನ್ಯ ಅಧ್ಯಕ್ಷರೇ, ಈಗ ಏನು ಮಸೂದೆಯನ್ನು ತಂದಿದ್ದಾರೆ ಇದು ಸಮರ್ಪಕವಾದುದು ಅಲ್ಲ. ಇದನ್ನು ೧೦ ವರ್ಷಗಳಾದಮೇಲೆ ತರಬೇಕಾಗಿತ್ತೇ ಹೊರತು ಈಗ ತರತಕ್ಕಂಥಾದ್ದು ಯೋಗ್ಯವಲ್ಲ ಆ ಕಾಲ ಇನ್ನೂ ಬಂದಿಲ್ಲ, ಪಕ್ವವಾಗಿಲ್ಲ ಆದ್ದರಿಂದ ಈ ಮಸೂದೆ ನ್ಯಾಯ ಸಮ್ಮತವಾದ ಮಸೂದೆಯಲ್ಲವೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಈ ಕಾನೂನಿನಿಂದ ದೊಡ್ಡ ಆತಂಕ ಬರುತ್ತದೆ. ಇದರಲ್ಲಿ ಸರ್ಕಾರದವರು ನಿರ್ದೇಶನ ಏನು ಈ ಕ್ಷೇತ್ರದಲ್ಲಿ ಇದೆ ಇದು ಕೂಡ ಇಲಾಖೆಗೆ ಉಳಿದಿರತಕ್ಕಂಥದ್ದು ಸರಿಯಲ್ಲ. ಒಂದು ಗ್ರಾಮದಲ್ಲಿ ಬೀಜದ ಉತ್ಪಾದನಾ ಕೇಂದ್ರವನ್ನು ತೆಗೆದರೆ ಮತ್ತೊಂದು ಗ್ರಾಮಕ್ಕೆ ವಿಸ್ತರಿಸುವುದಕ್ಕೆ ಬರುವುದಿಲ್ಲ ನಿರ್ಬಂಧಹಾಕಿದಂತಾಗುತ್ತದೆ. ಆರೀತಿ ನಿರ್ಬಂಧಗಳನ್ನು ವ್ಯವಸಾಯ ಕ್ಷೇತ್ರಗಳಲ್ಲಿ ಹಾಕಿದರೆ ವ್ಯವಸಾಯಗಾರ ಯಾವುದೇ ಒಂದು ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ತೊಂದರೆಯಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಒಂದು ತಾಲ್ಲೋಕಿನಲ್ಲಿ ಅಥವಾ ಹಳ್ಳಿಯಲ್ಲಿ ಯಾವುದಾದರೂ ಒಂದು

ಉತ್ಪಾದನಾ ಕೇಂದ್ರವನ್ನು ಮಾಡಿ ಅಲ್ಲಿ ಬೀಜವನ್ನು ಉತ್ಪಾದನೆ ಮಾಡುತ್ತಾರೆ. ಅಂದಮಾತ್ರಕ್ಕೆ ಇಡೀ ತಾಲ್ಲೋಕಿನಲ್ಲಿ ಬೇರೆ ಎಲ್ಲಿಯೂ ಈ ರೀತಿ ಉತ್ಪಾದನಾ ಕೇಂದ್ರ ವನ್ನು ಹಾಕಬಾರದು ಎಂದು ನಿರ್ಬಂಧ ಹಾಕಿದರೆ, ಯಾರು ಉತ್ಪಾದನೆ ಮಾಡ ಬೇಕೆಂದು ಆಕಾಂಕ್ಷೆ ಇಟ್ಟುಕೊಂಡಿರುತ್ತಾರೆ ಅವರಿಗೆ ನಿರಾಶೆಯಾಗುತ್ತದೆ. ಇಂಥ ಅಧಿಕಾರ ಸರ್ಕಾರಕ್ಕೆ ಕೊಟ್ಟರೆ ಒಂದು ತಾಲ್ಲೋಕಿನಲ್ಲಿ ಯಾವುದಾದರೂ ಉತ್ಪಾದನೆ ಕೇಂದ್ರ ಇದ್ದರೆ ಆ ತಾಲ್ಲೋಕಿನಲ್ಲಿ ಬೇರೆ ಯಾವ ಉತ್ಪಾದನಾ ಕೇಂದ್ರವನ್ನು ತೆಗೆಯಲು ಅವಕಾಶ ಇಲ್ಲದೆ ಜನರಿಗೆ ದೊಡ್ಡ ಕಷ್ಟವಾಗುತ್ತದೆ. ಸುಮಾರು ೧೭೭ ತಾಲ್ಲೋಕು ಗಳಲ್ಲಿ ಕೇಂದ್ರಗಳು ಇದ್ದರೆ ಸರ್ಕಾರ ೨೫–೩೦ ಕೇಂದ್ರಗಳನ್ನು ಕೈಗೊಳ್ಳುತ್ತದೆ. ಉಳಿದ ಕ್ಷೇತ್ರಗಳಲ್ಲಿ ಒಂದು ಜಿಲ್ಲೆಯಲ್ಲಿ ಒಂದು ಬೀಜದ ಉತ್ಪಾದನಾ ಕೇಂದ್ರವನ್ನು ತೆರೆದರೆ ಬೇರೆ ಯಾವ ತರಹದ ಬೀಜದ ಕೇಂದ್ರವನ್ನು ಮಾಡಲು ಅವಕಾಶವಿಲ್ಲದಂತೆ ಆಗುತ್ತದೆ.

ಅಧ್ಯಕ್ಷರು.— ತಿಮ್ಮಪ್ಪನವರೇ, ಇದು ಕೃಷಿಗೆ ಸಂಬಂಧಪಟ್ಟಿದ್ದು ಅಲ್ಲ. ಇದು ಹಾರ್ಟಿಕಲ್ಚರ್ ಬಗ್ಗೆ....

ಶ್ರೀ ಕೆ. ಎಚ್. ಪಾಟೀಲ.— ಇದು ಸೀಡ್‌ಫಾರಂ ಎಸ್ಟಾಬ್ಲಿಷ್ ಮಾಡುವು ದಕ್ಕೆ ಅವಕಾಶ ಇರಲಿ ಎಂದು ಇದನ್ನು ತಂದಿದ್ದೇವೆ ಅಷ್ಟೇ?

ಶ್ರೀ ಕಾಗೋಡು ತಿಮ್ಮಪ್ಪ.— ಉದಾರಣೆಗೆ ಕೆಲವರು ಮಾವಿನಗಿಡ ಕಷಿಮಾಡಿ ಅದನ್ನು ಹೈಬ್ರೀಡ್ ತಳಿಯನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಇಟ್ಟುಕೊಳ್ಳಿ.

ಶ್ರೀ ಎಚ್ ಎಂ. ಚೆನ್ನಬಸಪ್ಪ.— ಮಾನ್ಯ ತಿಮ್ಮಪ್ಪನವರೇ, ಈ ಮಸೂದೆ ಬಗ್ಗೆ ಇಷ್ಟೊಂದು ವ್ಯಾಖ್ಯಾನ ಮಾಡಬೇಕಾದ್ದು ಅವಶ್ಯವಿಲ್ಲ. ಹೈಬ್ರೀಡ್‌ಸೀಡ್ಸ್ ಒದಗಿಸುವ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ. ಇದನ್ನು ಯಾರು ಮಾಡ ಬೇಕು ಎಂಬುದು ಪ್ರಶ್ನೆ. ಇದು ತಾಂತ್ರಿಕವಾಗಿ ಒಳ್ಳೆಯ ಮೇಲ್ವಿಚಾರಣೆ ಇಟ್ಟು ಕೊಂಡು ಒಳ್ಳೆಯ ತಾಂತ್ರಿಕ ರೀತಿಯಲ್ಲಿ ಮಾಡಬೇಕಾದ್ದು ಅವಶ್ಯಕ. ಅದನ್ನೇ ಈಗ ನಾವು ಮಾಡಿರುವುದು. ಯಾರು ಹೈಬ್ರೀಡ್ ಸೀಡ್ಸ್‌ನ್ನು ಬೆಳೆಯುತ್ತಾರೆ ಅವರು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಬೀಜವನ್ನು ಉತ್ಪಾದನೆ ಮಾಡಿದರೆ ಸರಿ, ಇಲ್ಲವಾದರೆ ದೇಶದಲ್ಲಿ ಉತ್ಪಾದನೆ ಕಡಿಮೆಯಾಗಿ ಕೃಷಿ ಉತ್ಪಾದನೆ ಹೆಚ್ಚಾಗಲು ಅವಕಾಶವಾಗುವುದಿಲ್ಲ. ತಾವು ಹೇಳುವುದು ನನ್ನ ಮನಸ್ಸಿಗೆ ತಿಳಿದಹಾಗೆ ತಾಂತ್ರಿಕ ವಾಗಿ ದಕ್ಷತೆಯಿಂದ ಸರ್ಕಾರದ ಮೇಲ್ವಿಚಾರಣೆಯಲ್ಲಿ ಈ ಕೇಂದ್ರಗಳ ಅನುಕೂಲವನ್ನು ಉಪಯೋಗಿಸಿಕೊಳ್ಳಬಹುದು ಎನ್ನುವ ಒಂದು ಅಭಿಪ್ರಾಯ ತಮ್ಮದು. ಯಾವ ಜನ ಸರ್ಕಾರದ ಮೇಲ್ವಿಚಾರಣೆಯಲ್ಲಿ ಲೋಪಬಾರದಂತೆ ಉತ್ತಮ ತಳಿಯನ್ನು ಉತ್ಪಾದನೆ ಮಾಡುವುದಕ್ಕೆ ಮುಂದೆ ಬರುತ್ತಾರೆ ಅಂತಹ ಸರ್ಟಿಫೈಡ್ ಜನಗಳಿಗೂ ಅವಕಾಶ ಕೊಡಬೇಕು ಎನ್ನುವುದೇ ತಮ್ಮ ವಾದವೆಂದು ನಾನು ತಿಳಿದುಕೊಂಡಿದ್ದೇನೆ. ಇದರ

ಬಗ್ಗೆ ತಾವು ಒಂದು ಅಮೆಂಡ್‌ಮೆಂಟ್ ತಂದರೆ ಅದನ್ನು ಸರ್ಕಾರದವರು ಪರಿಗಣಿಸಬಹುದು.

ಶ್ರೀ ಕಾಗೋಡು ತಿಮ್ಮಪ್ಪ — ಉದಾಹರಣೆಗೆ ಗೇರುಗಿಡ, ಮಾವಿನಗಿಡ ಮುಂತಾದ ಇನ್ನು ಅನೇಕ ರೀತಿ ಗಿಡಗಳನ್ನು ಬೆಳೆಯಲು....

ಶ್ರೀ ಕೆ. ಎಚ್. ಪಾಟೀಲ್.— ಯಾವುದಾದರೂ ಸೀಡ್ ಬೆಳೆಯಲು ಖಾಸಗಿ ಜನಗಳಿಗೆ ಅವಕಾಶ ಕೊಟ್ಟರೂ ಕೂಡ ಅದರ ಪಕ್ಕದಲ್ಲಿ ಮತ್ತೊಬ್ಬರು ಜೋಳ ಬೆಳೆಯಬಾರದು ಎಂದು ಪ್ರೋಹಿಬಿಟ್ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ನಿಮ್ಮ ಸರ್ಕಾರದ ಫಾರಂನಲ್ಲಿ ಬೆಳೆಯತಕ್ಕಂಥ ತಳಿಗಿಂತ ಉತ್ತಮ ತಳಿಯನ್ನು ಬೆಳೆಯುವ ಖಾಸಗಿಯವರು ಇದ್ದಾರೆಂದು ನಾನು ಬೇಕಾದರೆ ತೋರಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ —ಹೈಬ್ರೀಡ್ ಉತ್ತಮ ತಳಿಯನ್ನು ಉತ್ಪಾದನೆ ಮಾಡಲು ಕೆಲವು ಪ್ರಕೃತಿ ನಿಯಮಗಳು ಬೇಕು. ಈಗ ಇರತಕ್ಕಂಥ ರೀತಿಯಲ್ಲಿ ಸರ್ಕಾರವೇ ಮಾಡಲಿ, ಖಾಸಗಿಯವರ ಕೈಯಲ್ಲೇ ಮಾಡಿಸಲಿ ಒಂದು ಫರ್ಲಾಂಗ್ ಎರಡು ಪರ್ಲಾಂಗ್ ದೂರದಮೇಲೆ ಮಾಡಬೇಕಾಗುತ್ತದೆ. ಆದ್ದರಿಂದ ಮಾಡಕೂಡದು ಎಂದು ಹೇಳುಲು ಸರ್ಕಾರಕ್ಕೆ ಅಧಿಕಾರವಿಲ್ಲ. ಇದಕ್ಕೆ ಬೇಕಾಗಿರುವ ಪ್ರಕೃತಿ ವಿಶೇಷಗಳನ್ನು ನಿರ್ಮಾಣ ಮಾಡಿಕೊಳ್ಳುವುದಕ್ಕೆ ಸರ್ಕಾರವೇ ಮಾಡಲಿ, ಅಥವಾ ಸಾರ್ವಜನಿಕರೇ ಮಾಡಲಿ, ಅವಕಾಶ ಕೊಡುತ್ತೇವೆಂದು ಇಟ್ಟುಕೊಳ್ಳಿ ನೀವು ಉತ್ತಮ ತಳಿ ಬೀಜವನ್ನು ಬೆಳೆಯಿರಿ ಎಂದರೆ ಒಂದೆರಡು ಫರ್ಲಾಂಗ ಒಳಗೆ ಬೇರೆ ತಳಿಯ ಬೀಜವನ್ನು ಬೆಳೆಯಬಾರದು. ಆ ರೀತಿ ಏನಾದರೂ ಬೆಳೆದರೆ ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಅದನ್ನು ಕ್ರಿಯೇಟ್ ಮಾಡಿಕೊಳ್ಳಬೇಕಾದರೆ ಅಧಿಕಾರ ಬೇಕೋ ಇಲ್ಲವೋ ಹೇಳಿ. ಇಷ್ಟೇ ಇದರ ಮೂಲ ಉದ್ದೇಶ.

ಶ್ರೀ ಕಾಗೋಡು ತಿಮ್ಮಪ್ಪ.— ಸೆಕ್ಷನ್ ನಾಲ್ಕರಲ್ಲಿ ತಾವು ಏನು ಹೇಳುತ್ತೀರಿ? ಸೆಕ್ಷನ್ ಮೂರರ ಪ್ರಕಾರ ಏನು ಹೇಳುತ್ತೀರಿ? ಈ ಸೀಡ್ ಫಾರಂ ಗ್ರಾಮ ಗ್ರಾಮಕ್ಕೂ ಸೀಮಿತವಾಗಿರುತ್ತದೆ. ಇಡೀ ತಾಲ್ಲೂಕಿನಲ್ಲಿ ಒಂದು ಫಾರಂ ಮಾಡಿದರೆ ಮತ್ತೊಬ್ಬರು ಯಾರು ಮಾಡಬಾರದು ಎಂದು ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ?

ಶ್ರೀ ಕೆ. ಎಚ್. ಪಾಟೀಲ.— ಇಷ್ಟು ದೂರದಲ್ಲಿ ಈ ಬೆಳೆಯನ್ನು ಇಡಬಾರದು ಎಂದು ಹೇಳುತ್ತೇವೆ ಅಷ್ಟೆ. ಯಾರು ಯಾವ ಬೆಳೆಯನ್ನೂ ಬೆಳೆಯಬಾರದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ — ಎರಡು. ಮೂರು ಫರ್ಲಾಂಗ ಎಂದರೆ ಅರ್ಥ ಎಲ್ಲೂ ಬೆಳೆಯಬಾರದು ಎಂದು ಅಲ್ಲ, ಯಾವಾಗಲೂ ಪರ್ಟಿಕುಲರ್ ಕ್ರಾಪ್ ಬೆಳೆಯಬೇಕಾದರೆ ಅದಕ್ಕೆ ತಕ್ಕಂತೆ ಏರಿಯಾ ಇರುತ್ತವೆ, ಆ ಬೆಳೆಗೆ ಬೇಕಾದಂಥ

ವಿಧಾನಗಳು ಇರುತ್ತವೆ. ಯಾವ ಬೆಳೆಗೆ ಎಷ್ಟು ಜಾಗ ಮತ್ತು ಎಷ್ಟು ಅಂತರ ದೂರ ಇರಬೇಕೆಂದು ತಾಂತ್ರಿಕವಾಗಿ ಇರುತ್ತದೆ ಅಷ್ಟನ್ನು ಮಾತ್ರ ಪ್ರೊಹಿಬಿಟ್ ಮಾಡುತ್ತೇವೆ. ಅವೆಲ್ಲಾ ಈ ರೂಲಿನಲ್ಲಿ ಬರುತ್ತವೆ.

ಶ್ರೀ ಕೆ. ಎಫ್. ಪಾಟೀಲ.— ಹೈಬ್ರೀಡ್ ಬೀಜ ಬೆಳೆಯುವ ವಿಷಯದಲ್ಲಿ ಖಾಸಗಿಯವರೇ ಆಗಲಿ ಅಥವಾ ಸರ್ಕಾರದವರೇ ಆಗಲಿ ಈ ಬೆಳೆಯನ್ನು ತೆಗೆಯಬೆ ಕಾದರೆ ಇದರಲ್ಲಿ ಬಹಳ ಕಷ್ಟವಿರುತ್ತದೆ. ಉದಾಹರಣೆಗೆ ಹೇಳಬೇಕೆಂದರೆ ನಾನು ಸ್ವತಃ ಹೈಬ್ರೀಡ್ ಬೆಳೆ ಬೆಳೆದಿದ್ದೇನೆ. ಈ ಬೆಳೆಯನ್ನು ಇಡಬೇಕಾದರೆ ಪಕ್ಕದಲ್ಲಿ ಸುಮಾರು ೮ ನೂರು ಅಡಿಗಳಷ್ಟಾದರೂ ಅಂತರವಿರಬೇಕು. ಸಾದಾ ಜೋಳದ ಬೀಜ ಹಾಕಿದರೂ ಕೂಡ ಈ ಅಂತರ ಇಲ್ಲದೆ ಹೋದರೆ ಹೈಬ್ರೀಡ್ ಬೆಳೆ ಕೆಟ್ಟು ಹೋಗುತ್ತವೆ. ಇದರಿಂದ ಬಹಳಷ್ಟು ಜನರು ಮೈಜ್ ಬೆಳೆಯಲು ಹೋಗಿ ಬೇಕಾದಷ್ಟು ನಷ್ಟ ಹೊಂದಿರುವವರು ಇದ್ದಾರೆ.

ಮಾನ್ಯ ತಿಮ್ಮಪ್ಪನವರ ಅಭಿಪ್ರಾಯದ ಪ್ರಕಾರ ಸರ್ಕಾರದವರು ಸೀಡ್ ಪಾರ್ಮಿಂಗ್ ಮಾಡಲೀ ಅಥವಾ ಖಾಸಗೀಯವರು ಸೀಡ ಫಾರ್ಮಿಂಗ್ ಮಾಡಲೀ, ೮೦೦ ಅಡಿ ಅಥವಾ ೩೦೦ ಅಡಿಯ ತನಕ ಬೇರೆಯವರು ಇದೇ ಬೀಜವನ್ನು ಬೆಳೆಸಬಾರದು ಎನ್ನುವ ರಿಸ್ಟ್ರಿಕ್ಶನ್ ಹಾಕುವುದು ಅತ್ಯಾವಶ್ಯಕ. ಇದನ್ನು ಸರ್ಕಾರದವರು ಮಾಡಬೇಕೇ, ಖಾಸಗೀಯವರು ಮಾಡಬೇಕೇ ಎನ್ನುವ ಅಭಿಪ್ರಾಯಗಳು ನಮ್ಮ ಮುಂದೆ ಇವೆ. ಇವತ್ತು ಕೆಲವೊಂದು ಹಿತಾಸಕ್ತಿಗಳು ಇಡೀ ಊರಿಗೆ ಊರಿನಲ್ಲಿ ನಿರ್ಧಿಷ್ಟವಾದ ಬೀಜಗಳನ್ನು ಬೆಳೆಸಲಿಕ್ಕೆ ಲಾವಣಿ ಹಾಕಿಕೊಂಡು ಕೋಟ್ಯಾಧೀಶ್ವರರಾಗಿದ್ದಾರೆ. ಸೀಡ್ ಕಿಂಗ್ಸ್ ಆಗಿದ್ದಾರೆ. ಇಲ್ಲಿ ಅತ್ಯುತ್ತಮವಾದ ಬೀಜಗಳನ್ನು ಬೆಳೆಯುವುದಕ್ಕೆ ಪ್ರಾಶಸ್ತ್ಯ ಕೊಡಬೇಕಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಸರ್ಕಾರದವರೇ ಎಲ್ಲವನ್ನೂ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಮಾಡಬೇಕು. ಎಲ್ಲವನ್ನೂ ಸರ್ಕಾರದವರೇ ಮಾಡುತ್ತಾರೆಯೇ ಅಥವಾ ಖಾಸಗೀಯವರಿಗೂ ಪರವಾನಗೆ ಕೊಡುತ್ತಾರೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ — ಮಾನ್ಯ ಪಾಟೀಲರ ಉದ್ದೇಶ ಏನೆಂದರೆ, ಸೀಡ್ಸ್ ಪಾಲಿನೇಷನ್ ಆಗಬೇಕು ಎನ್ನುವ ದೃಷ್ಟಿಯಿಂದ ಒಂದು ಸೀಡ್ ಫಾರ್ಮಿನಿಂದ ಇನ್ನೊಂದು ಸೀಡ್ ಫಾರಂಗೆ ಇಷ್ಟು ದೂರ ಇರಬೇಕು, ಇಷ್ಟು ಅಂತರ ಇರಬೇಕು ಎನ್ನುವ ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಆದರೆ ಇಲ್ಲಿ ಏನಾಗಿದೆ ಎಂದರೆ, ವ್ಯವಸಾಯ ವಿಜ್ಞಾನದಲ್ಲಿ ಇನ್ನೂ ಸ್ಪಷ್ಟವಾದಂಥ ಕೆಲವು ತೀರ್ಮಾನಕ್ಕೆ ನಾವು ಬಂದಿಲ್ಲ. ಜೋಳ ಹಾಕಿದಾಗ, ಆ ಜೋಳದ ನಿರ್ಧಿಷ್ಟವಾದ ಪ್ರದೇಶದಿಂದ ಒಂದೇ ಪಾಲನೇಷನ್ ಆಗಬೇಕು ಎನ್ನುವ ದೃಷ್ಟಿಯಿಂದ ಇನ್ನೊಂದು ಪ್ರದೇಶಕ್ಕೆ ಒಂದೆರಡು ಫರ್ಲಾಂಗ ಇಷ್ಟು ದೂರ ಇರಬೇಕು ಎಂದು ಯಾವ ಥಿಯರಿಯಲ್ಲಿಯೂ ಖಚಿತವಾಗಿ ಹೇಳಿಲ್ಲ. ತಾವು ಯಾವ ಒಂದು ಕ್ಷೇತ್ರವನ್ನು ಇದಕ್ಕಾಗಿ ಸೀಮಿತ

ಗೊಳಿಸುತ್ತೀರೋ ಅದರ ಅಕ್ಕ ಪಕ್ಕದಲ್ಲಿ ಯಾರೂ ಇದೇ ಬೀಜವನ್ನು ಹಾಕಬಾರದು ಎನ್ನುವ ನಿಷೇಧವನ್ನು ತಾವು ಹಾಕುತ್ತಿದ್ದೀರಿ. ಎಷ್ಟು ದೂರ ಇದೇ ರೀತಿಯ ಬೀಜವನ್ನು ಹಾಕಬಾರದು ಎನ್ನುವುದಕ್ಕೆ ತಾವು ವಿವರಣೆಯನು ಕೊಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾವು ರೂಲ್ಸ ಮಾಡುವಾಗ, ಇಂಥಿಂಥ ಕಡೆಗೆ ಇಷ್ಟು ಇಷ್ಟು ದೂರ ಇಂಥಿಂಥ ಬೀಜಗಳನ್ನು ಬೆಳೆಯಬೇಕು ಎಂದು ಮಾಡ ತಕ್ಕದ್ದು ಇದೆ. ಬೀಜಗಳನ್ನು ಸರ್ಕಾರದವರು ಮಾಡುವುದರ ಜೊತೆಗೆ ಖಾಸಗಿ ಜನರು ಹಾಕಬಹುದೇ ಎನುವುದಕ್ಕೆ ಮಾನ್ಯ ಮಂತ್ರಿಗಳು ಯೋಚನೆ ಮಾಡಿ ತವಗೆ ಹೇಳುತ್ತಾರೆ. ಇಲ್ಲಿ ಒಂದು ಅಂಶವನ್ನು ನಾನು ಸ್ಪಷ್ಟಪಡಿಸಬೇಕಾಗುತ್ತದೆ. ಉದಾ ಹರಣೆಗೆ, ಎಬ್ಬ ಒಂದು ಎಕರೆಯಲ್ಲಿ ಒಂದು ರೀತಿಯ ಬೀಜವನ್ನು ಹಾಕಿದರೆ, ಮತ್ತೊಬ್ಬ ನಾನು ಅದೇ ಬೀಜವನ್ನು ಹಾಕುತ್ತೇನೆ ನೀವು ಯಾರು ಕೇಳಲಿಕ್ಕೆ ಎಂದು ಹೇಳಿದರೆ, ಹೇಗೆ? ಅವನು ಉತ್ತಮವಾದ ಬೀಜವನ್ನು ಬೆಳೆಯದೇ ಇದ್ದ ಪಕ್ಷದಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಇಷ್ಟು ಇಷ್ಟು ದೂರದಲ್ಲಿ ಇಂಥಿಂಥ ಬೀಜಗಳನ್ನು ಹಾಕಬೇಕು ಎಂದು ಲೈಸನ್ಸ ಕೊಟ್ಟ ಪಕ್ಷದಲ್ಲಿ ಬೀಜಗಳಿಗೆ ತೊಂದರೆಯಾಗಲಾರದು.

ಶ್ರೀ ಎಚ್. ಸಿದ್ದವೀರಪ್ಪ.—ಯಾರಾದರೂ ಆಗಲೀ, ಅವರು ಕೊಟ್ಟ ಬೀಜ ಹುಟ್ಟುವುದಿಲ್ಲ ಎಂದರೆ ಅವರಿಗೆ ಶಿಕ್ಷೆ ಮಾಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ಸರ್ಕಾರದ ಕಂಟ್ರೋಲಿನಲ್ಲಿ ಬೆಳೆಯ ಬೇಕು. ಅಥವಾ ಸರ್ಕಾದವರೇ ಬೆಳೆಸುವುಂತೆ ಆಗಬೇಕು. ಈ ರೀತಿ ಮಾಡದೇ ಇದ್ದರೆ, ದೇಶದಲ್ಲಿ ಜನಗಳಿಗೆ ತೊಂದರೆಯಾಗುತ್ತದೆ. ಎರಡೂ ಇಲ್ಲದೆ, ಯಾರಾದರೂ ಬೀಜ ಬೆಳಿಯಬಹುದು ಎಂದರೆ ಇದರಿಂದ ನಷ್ಟವಾಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಅನೇಕ ವ್ಯವಸಾಯ ತಾಂತ್ರಿಕಜ್ಞರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ತುಮಕೂರು ಜಿಲ್ಲೆಗಳಲ್ಲಿ ಮತ್ತು ಇತರ ಜಿಲ್ಲೆಗಳಲ್ಲಿ ತೆಂಗಿನ ಸಸಿಗಳನ್ನು, ಮಾವಿನ ಸಸಿಗಳನ್ನು ಉತ್ತಮವಾಗಿ ಬೆಳೆಸುತ್ತಾರೆ ಎಂದು ಹೇಳಿದ್ದಾರೆ ಖಾಸಗೀ ಜನರ ಉತ್ತಮವಾದ ಬೀಜಗಳನ್ನು ಜನರಿಗೆ ಕೊಡುತ್ತಿದ್ದಾರೆ.

ಅರಸೀಕೆರೆ ಜಿಲ್ಲೆಯಲ್ಲಿ ಸಸಿಗಳನ್ನು ತಂದು ಮಲೆನಾಡಿನಲ್ಲಿ ಉತ್ತಮವಾದಂಥ ತೆಂಗಿನ ಮರಗಳನ್ನು ಬೆಳೆಸಿದ್ದಾರೆ ಆದ್ದರಿಂದ ಅಲ್ಲಿ ಉತ್ತಮವಾಂಥ ಸಸಿಗಳನ್ನು ಬೆಳೆಸತಕ್ಕ ಜನಗಳು ಇದ್ದಾರೆ. ಅರಸೀಕೆರೆ ಸೀಡ್ ಫಾರ್ಮಿಂಗ್ ಏನು ಇದೆ ಅದರ ಸುತ್ತುಮುತ್ತು ಖಾಸಗೀ ಜನರು ತೆಂಗಿನ ಸಸಿಗಳನ್ನು ಬೆಳೆಸುತ್ತಾರೆ. ಇವತ್ತು ಸರ್ಕಾರದವರು ತಮ್ಮ ಸೀಡ್ ಫಾರ್ಮಿಂಗ್ ಇಂದ ಇಷ್ಟು ದೂರು ಯಾರೂ ತೆಂಗಿನ ಸಸಿಗಳನ್ನು ಬೆಳೆಸಬಾರದು ಎನ್ನುವ ನಿರ್ಬಂಧವನ್ನು ಹಾಕಿದರೆ, ದೇಶದಲ್ಲಿ ಜನಗಳಿಗೆ ತೊಂದರೆಯಾಗುತ್ತದೆ. ಅಕ್ಕಪಕ್ಕದ ಜಿಲ್ಲೆಯವರು ಇವರನ್ನೇ ನಂಬಿ

ಕೊಂಡು ಕೂತಿದ್ದಾರೆ. ಇವರಿಂದ ಸಂಪೂರ್ಣವಾಗಿ ಫಲವನ್ನು ಅವರು ಪಡೆಯು ಬೇಕಾಗಿದೆ. ಖಾಸಗೀ ಜನರು ಒದಗಿಸತಕ್ಕಂಥ ತೆಂಗಿನ ಸಸಿಗಳನ್ನು ನೆಟ್ಟು ಇವತ್ತು ಒಳ್ಳೆಯ ಫಸಲನ್ನು ಕೃಷಿದಾರರು ಪಡೆಯುವುದಕ್ಕೆ ಸಾಧ್ಯವಾಗಿದೆ. ಕೆಲಸಕ್ಕೆ ಬಾರದೆ ಇರತಕ್ಕಂಥ ಸಸಿಗಳನ್ನು ಬೆಳೆಸುವುದಕ್ಕೆ ತಾವು ಪ್ರೋತ್ಸಾಹ ಕೊಡಬೇಡಿ. ಆದ್ದರಿಂದ ತಮ್ಮ ನಿರ್ಭಂದ ಏನು ಇದೆ, ಇದಕ್ಕೆ ಸ್ವಲ್ಪ ಬ್ರೇಕ್ ಹಾಕಬೇಕಾಗುತ್ತದೆ. ಆ ಪ್ರದೇಶದಲ್ಲಿ ಯಾರೂ ತೆಂಗಿನ ಸಸಿಗಳನ್ನು ಬೆಳೆಸುವುದಕ್ಕಾಗುವುದಿಲ್ಲ ಎನ್ನುವ ನಿರ್ಭಂದವನ್ನು ಹಾಕಿದರೆ, ಜನರಿಗೆ ತೊಂದರೆಯಾಗುತ್ತದೆ. ನಾನು ಈ ಸಂದರ್ಭ ದಲ್ಲಿ ತಮ್ಮನ್ನು ಒಂದು ಪ್ರಶ್ನೆ ಕೇಳಬೇಕಾಗಿದೆ, ಸರ್ಕಾರದವರು, ತೆಂಗಿನ ಸಸಿ, ಅನಾನಸ್, ಮತ್ತು ಇನ್ನು ಇತರೆ ಸಸಿಗಳನ್ನು ಸಂಪೂರ್ಣವಾಗಿ, ವ್ಯವಸಾಯ ಗಾರರಿಗೆ ಬೇಕಾಗುವಷ್ಟು ಸಸಿಗಳನ್ನು ಒದಗಿಸುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತಾರೆಯೋ ? ಇದು ಆಗುವುದಿಲ್ಲ ಎಂದು ನನ್ನ ಭಾವನೆ. ತಾವು ಹೈ ಈಲ್ಡಿಂಗ್ ಸೀಡ್ ಫಾರ್ಮಿಂಗ್ ಮಾಡಿದರೆ, ಅದರ ಒಂದು ನೂರು ಗಜದಲ್ಲಿ ಯಾರೂ ಅದೇ ಬೀಜವನ್ನು ಬೆಳೆಯಬಾರದು ಎಂದು ಕಾನೂನನ್ನು ಮಾಡಲಿ, ಆದರೆ ಇದೇ ಸಂದರ್ಭವನ್ನು ಬೇರೆ ಜನರು ಉಪಯೋಗಿಸಿಕೊಂಡು, ತಮ್ಮ ಒಲುವನ್ನು ಪಡೆದು ಕೊಂಡು, ಅವರು ಒಂದು ಪ್ರದೇಶದಲ್ಲಿ ಬೀಜವನ್ನು ಬೆಳೆಯಲಿಕ್ಕೆ ಪರವಾನಗೆ ಪಡೆದುಕೊಂಡು, ಅವರ ಜಮೀನಿನ ಸುತ್ತಮುತ್ತ ನಿರ್ದಿಷ್ಟವಾದ ಬೀಜವನ್ನು ಯಾರೂ ಹಾಕಬಾರದು ಎಂದು ನೋಟಿಫಿಕೇಷನ್ ಅನ್ನು ಹೊರಡಿಸಿದರೆ, ಉತ್ತಮ ಬೀಜ ಪಡೆಯಕ್ಕ ವ್ಯವಸಾಯಗಾರನ ಗತಿ ಏನಾಗಬೇಕು ? ಇದನ್ನು ತಾವು ಚೆನ್ನಾಗಿ ಮನಗಾಣಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತಮವಾದಂಥ ಮಾವಿನ ಸಸಿಗಳನ್ನು ಬೆಳೆಸುತ್ತಾರೆ. ಇದು ಸರ್ಕಾರದ ಸೀಡ್ ಫಾರ್ಮಿಂಗ್ ಇಂದ ಸಾಧ್ಯವಾಗುವುದಿಲ್ಲ. ಅಲ್ಲಿ ತಮ್ಮ ಸೀಡ್ ಫಾರ್ಮಿಂಗ್‌ನ ಅಕ್ಕಪಕ್ಕದವರು ಯಾರೂ ಸಸಿಗಳನ್ನು ಬೆಳೆಸಬೇಡಿರಿ ಎಂದು ನಿರ್ಭಂದ ಹಾಕುವುದಾದರೆ ತೊಂದರೆಯಾಗುತ್ತದೆ ಆದ್ದರಿಂದ ಕಂಟ್ರೋಲ್ಡ್ ಏರಿಯಾದ ಸೀಮಿತವನ್ನು ಸ್ಪಷ್ಟಪಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂದು ಹೈ ಬ್ರೀಡ್ ಡೆವಲಪ್‌ಮೆಂಟ್ ಆಗುತ್ತಿದೆ, ಒಂದೊಂದು ಪ್ರದೇಶದಲ್ಲಿ ಒಂದೊಂದು ತರಹ ಬೀಜ ಕೊಟ್ಟರೆ ಉತ್ತಮ ಫಸಲು ಬೆಳೆಯಲು ಸಾಧ್ಯ. ರೂಲ್ಸ್‌ನಲ್ಲಿ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ನೋಟಿಫಿಕೇಷನ್ ಹೊರಡಿಸುವಾಗ ಸಾರ್ವಜನಿಕರ ಅಭಿಪ್ರಾಯ ತಿಳಿದು ಮಾಡ ಲಾಗುವದು. ಮುಖ್ಯವಾಗಿ ರೈತರಿಗೆ ಸಹಾಯವಾಗುವಂತಿರಬೇಕು ಎಂಬುದು ಎಲ್ಲರ ಅಭಿಪ್ರಾಯ.

ಶ್ರೀ ಕಾಗೋಡು ತಿಮ್ಮಪ್ಪ.—ಈ ದಿವಸ ನೀವು ಪಬ್ಲಿಷ್ ಮಾಡುವ ರೂಲ್ಸ್

ಮತ್ತು ರೆಗ್ಯುಲೇಷನ್ನುಗಳು ಎಷ್ಟುಮಟ್ಟಿಗೆ ಗ್ರಾಮಗಳಲ್ಲಿರುವವರಿಗೆ ಗೊತ್ತಾಗಿದೆ ? ಅಲ್ಲಿರುವವರಿಗೆ ಯಾರು ಓದಿ ಹೇಳುವರು ?

Sri H. M. CHANNABASAPPA.—It is very unfortunate that Sri Kagodu Thimmappa who hails from village and who is keen on production of hybrid seeds, is speaking in this manner. Is it ever possible to put in the Act, so much of isolation distance is prescribed ? There are different isolation spaces for different crops. ಇವತ್ತು ೨೦೦ ಗಜ ದೂರದಲ್ಲಿರಬೇಕೆಂದು ತಿಳಿಸಿದರೆ ನಾಳೆ ನೂರು ಗಜ ಸಾಕು ಎಂದು ಹೇಳಬಹುದು, ೫೦ ಗಜ ಸಾಕು ಎಂದು ಹೇಳಬಹುದು. ಇದನ್ನು ಆತುರವಾಗಿ ಮಾಡುವುದಕ್ಕಾಗುತ್ತದೆಯೇ ? Therefore, is it ever possible to prescribe it in the Bill the enactment ? No. The principle is accepted that depending upon the recommendations of the technical people, we will prescribe certain isolation spaces for certain crops.

ಶ್ರೀ ಕಾಗೋಡು ತಿಮ್ಮಪ್ಪ.—ಇಂದು ಮಲೆನಾಡಿನಲ್ಲಿ ಅಡಿಕೆ ಬೆಳೆಯುತ್ತೇವೆ. ಉತ್ತಮ ತಳಿ ಉಪಯೋಗಿಸಬೇಕೆಂದು ಹೇಳುತ್ತೀರಿ, ಅದನ್ನು ಒಪ್ಪುತ್ತೇನೆ. ಎಲ್ಲರಿಗೂ ಅದನ್ನೇ ಉಪಯೋಗಿಸಬೇಕೆಂಬ ಅಭಿಲಾಷೆ ಇದೆ. ಇಂದು ನಾನು ಕೆಲವರನ್ನು ಕೇಳಿದ್ದೇನೆ ಅಡಿಕೆ ಸೊಸಿ ಬೆಳೆಸುವಾಗ ಒಂದು ಸಸಿಗೂ ಇನ್ನೊಂದಕ್ಕೂ ಎಷ್ಟು ದೂರ ಇರಬೇಕು ಎಂಬುದನ್ನು ಕಂಡುಹಿಡಿದಿಲ್ಲವೆಂದು ಹೇಳುವರು. ಸಾಗರದಲ್ಲಿ ಅಡಿಕೆ ಸಸಿಗಳನ್ನು ಸೀಡ್ ಫಾರಂನಲ್ಲಿ ಬೆಳೆಸುತ್ತಿದ್ದಾರೆ. ನೂರು ಅಡಿ ದೂರದಲ್ಲಿ ಅವನ್ನು ಹಾಕಿದರೆ ಮಧ್ಯ ಇರುವ ಜಾಗದಲ್ಲಿ ಬೇರೆ ಏನಾದರೂ ಬೆಳೆಸುವುದಕ್ಕೆ ಅವಕಾಶವಿದೆ. ನೀವೇ ತಿಳಿಸಿರುವ ವಿಚಾರ ಇದು. ಹಾರ್ಟಿಕಲ್ಚರಿನಲ್ಲಿ ನೂರಾರು ಕುಲ ಎಲ್ಲಿದೆ ? ತೆಂಗು, ಮಾವು, ಅಡಿಕೆ ಅನಾನಸ್ ಮುಂತಾದ ೫ ಜಾತಿಯ ಗಿಡಗಳನ್ನು ಬೆಳೆಸುವ ಸಂದರ್ಭವಿದೆ. ಆದುದರಿಂದ ಉದ್ದೇಶಗಳನು ವಿವರಿಸುವಾಗ ಕೆಲವು ಮಾಹಿತಿಗಳನ್ನಾದರೂ ಕೊಡಬೇಕಾಗಿತ್ತು. ಮಾವಿನ ಸಸಿ ಬೆಳೆಸಬೇಕಾದರೆ ಇಷ್ಟು ಪ್ರದೇಶದಲ್ಲಿ ಯಾವುದೂ ಇರಬಾರದು ಎಂದು ವಿವರಣೆ ಕೊಡಬೇಕಾಗಿತ್ತು. ಇಲ್ಲದಿದ್ದರೆ ಸರಿಯಾಗಿ ಬೆಳೆಯುವುದಿಲ್ಲ ಎಂದು ಹೇಳಬೇಕಾಗಿತ್ತು. ಹೀಗೆ ಮಾಡಿದ್ದರಿಂದ ಬೀಜ ಕೆಟ್ಟು ಹೋಗಿದೆ ಎಂದು ಹೇಳಿದ್ದೀರಿ. ನೀವು ಹೇಳುವುದೇ ವೇದವಾಕ್ಯ ಎಂದು ಹೇಗೆ ನಂಬಿಕೊಂಡಿರಲು ಸಾಧ್ಯ ? ಇಷ್ಟು ದೂರದಲ್ಲಿ ಬೇರೆ ಯಾವುದೂ ಇರಬಾರದು ಎಂದು ತಿಳಿಸಬೇಕು.

Sri H. M. CHANNABASAPPA.—If not the hon. member a farmer and a lawyer also ? Unfortunately he is an able lawyer and not an able farmer. That is the difference.

Sri KAGODU THIMMAPPA.–This Bill involves a politician's approach ನೀವು ಪಾಲಿಟಿಕ್ಸ್ ಬಿಡಿ. ನಾನು ವಕೀಲಿ ಬಿಡುತ್ತೇನೆ. ವ್ಯವಸಾಯಗಾರರಾಗಿ ಇಬ್ಬರೂ ಯೋಚನೆ ಮಾಡೋಣ. ವ್ಯವಸಾಯಗಾರರು ಬಹಳ ಕೆಳಮಟ್ಟದಲ್ಲಿದ್ದಾರೆ. ಅವರ ದೃಷ್ಟಿ ಗಮನಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕು. ನಾವು ಮಾಡಿದ್ದೇ ಸರಿ ಎಂದರೆ ಅದನ್ನು ಒಪ್ಪುವುದಕ್ಕಾಗುವದಿಲ್ಲ. ಆದುದರಿಂದ ಪ್ರಗತಿಪಥದಲ್ಲಿ ಹೋಗಬೇಕು, ಜನರ ಸ್ಥಿತಿಗತಿ ನೋಡಿ ಮಸೂದೆ ಮಾಡಬೇಕಾಗುತ್ತದೆ. ಜನ ಕೆಳಮಟ್ಟದಲ್ಲಿ ಆಲೋಚನೆ ಮಾಡುವಾಗ ಎತ್ತು ಎರಗೆಳೆದರೆ ಕೋಣ ನೀರಿಗೆಳೆಯಿತು ಎನ್ನುವಂತಾಗಬಾರದು. ದೂರದ ವಿಚಾರ ನಿಯಮಗಳಲ್ಲಿ ನಮೂದು ಮಾಡುವುದಾಗಿ ಹೇಳುತ್ತೀರಿ. ಕಾನೂನಿನಲ್ಲೇ ಅದನ್ನು ನಿಗದಿಮಾಡಿ ತಿಳಿಸಿ; ನಿರ್ದಿಷ್ಟಪಡಿಸಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ರೂಲ್ಸ್ ಎಲ್ಲಾ ನಿಮ್ಮ ಮುಂದೆ ಬರುತ್ತದೆ. ಆಕ್ಟಿನಲ್ಲೇ ತಾವು ಹೇಳುವುದನ್ನೆಲ್ಲಾ ಪ್ರಿಸ್ಕ್ರೈಬ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ.— ಬೀಜ ಉತ್ಪತ್ತಿಯಾಗಲು ಇಂಟರ್ ಪಾಲಿನೇಷನ್ ಆಗಬೇಕು, ಅದು ಎಲ್ಲ ಸಂದರ್ಭಗಳಲ್ಲೂ ಆಗಬೇಕು. ಪಾಲಿನೇಷನ್ ಆಗುವ ವಿಧಾನ ಒಂದೇ. ಅದಕ್ಕೆ ಒಂದು ಫಾರ್ಮುಲ ಇದೆ. ಪಾಲಿನೇಷನ್ ಆಗಬೇಕಾದ್ದು ಮುಖ್ಯವಾದುದು. ಈ ದೃಷ್ಟಿಯಿಂದ ಕೆಲವು ಗೊತ್ತಾದ ದೂರದಿಂದಾಚೆಗೆ ಇರಬೇಕು ಎಂದು ಹೇಳುವುದು.

ಶ್ರೀ ಕೆ. ಎಚ್. ಪಾಟೀಲ.— ಈಗ ಟೊಮ್ಯಾಟೋ ಇದೆ, ಇದರ ವಿಚಾರದಲ್ಲಿ ನೂರು ಅಡಿಗಿಂತ ಹೆಚ್ಚಾಗಿ ದೂರ ಇರಬಾರದೆಂದಿದೆ, ಮಾವು ಹತ್ತು ಮೈಲಿ ಆಚೆ ಹಾಕಿದರೂ ಆಗಬಹುದು. ಇಲ್ಲದಿರುವುದನ್ನು ಈಗ ಮಾಡುತ್ತಿದ್ದೇವೆ. ಸುಧಾರಣೆ ಮಾಡಬೇಕು. ಹೈಬ್ರಿಡ್ ಬೀಜ ಉಪಯೋಗಿಸಿ ಹೆಚ್ಚು ಬೆಳೆಯಬೇಕು ಎಂಬುದೇ ಇದರ ಉದ್ದೇಶ.

ಶ್ರೀ ಕಾಗೋಡು ತಿಮ್ಮಪ್ಪ.— ಮಾವಿನ ಗಿಡ ಇಷ್ಟು ದೂರದಲ್ಲಿರಬೇಕು, ಅಡಿಕೆ ಮರ ಇಷ್ಟು ದೂರದಲ್ಲಿರಬೇಕು ಎಂದು ಯಾರು ತಿಳಿಸಿದ್ದಾರೆ?

Sri H. M. CHANNABASAPPA.— I will appeal to the hon. member to make a study. Let him take it from that different distances are required for different crops By further experimentation it may be reduced and it may have to be increased. We will have to fix these ranges of isolation as and when the results of researches are available. As known today, there are certain distances. But by further experimentation and research it can be reduced or increased. I want Sri Thimmappa to appreciat this position. There

is no intention on the part of the Government to harass any body. It is necessary that Government should take power to enforce things in the interest of national development.

ಶ್ರೀ ಕಾಗೋಡು ತಿಮ್ಮಪ್ಪ.— ಶ್ರೀ ಚನ್ನಬಸಪ್ಪನವರು ಹೇಳುವ ಮಾತನ್ನು ಒಂದು ದೃಷ್ಟಿಯಿಂದ ಒಪ್ಪುವುದಾದರೂ ಇನ್ನೊಂದು ದೃಷ್ಟಿಯಿಂದ ಒಪ್ಪುವಂತಿಲ್ಲ. ಒಂದು ಖಾತರಿ ಮಾಡಿಕೊಡಬೇಕು. ನೀವು ಬೆಳೆಸುವ ಒಂದು ಗೊತ್ತಾದ ಪ್ರದೇಶದಲ್ಲಿ ಬೇರೆಯವರಿಗೆ ಬೆಳೆಸಲು ಅವಕಾಶ ಇರಬಾರದು ಎಂಬ ಉದ್ದೇಶವಿದ್ದರೆ ತುಂಬ ತೊಂದರೆಯಾಗುತ್ತದೆ. ನಿಮ್ಮ ಸೀಡ್ ಫಾರಂ ಅಭಿವೃದ್ಧಿಯಾಗಿಲ್ಲ. ಹಾಗಿರುವಾಗ ಈ ರೀತಿ ಮಾಡಬಾರದು. ವ್ಯವಸಾಯಗಾರರಿಗೆ ಯಾವುದೇ ದೃಷ್ಟಿಯಿಂದ ಬಾಧಕವಾಗದಂತೆ ಆಸಕ್ತಿ ವಹಿಸಿ ತಕ್ಕ ಅವಕಾಶ ಕಲ್ಪಿಸಬೇಕು. ಈ ದಿವಸ ಇಂಥ ಮಸೂದೆಯನ್ನು ಅಧಿಕಾರಿಗಳು ಕೊಟ್ಟ ಮಾಹಿತಿಯ ಪ್ರಕಾರ ತರುವುದರಿಂದ ಏನು ಪರಿಣಾಮವಾಗುತ್ತದೆ ಎಂದು ಇನ್ನೊಂದು ಸಲ ಆಲೋಚನೆಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ವ್ಯವಸಾಯಗಾರರನ್ನು ಬಿಟ್ಟು ಮಾತನಾಡುವ ಪ್ರಶ್ನೆಯಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಇದನ್ನು ಬರೀ ಸರಕಾರ ನಡೆಸುವುದಲ್ಲ ಉತ್ತಮ ದರ್ಜೆಯಲ್ಲಿ ನಡೆಸುವವರಿಗೆ ತಿಳಿದವರಿಗೆ ಅವಕಾಶವಿರಬೇಕು ಎಂಬುದು ತಮ್ಮ ಉದ್ದೇಶ. ಇದಕ್ಕೆ ಅವಕಾಶವಾಗುವಹಾಗೆ ಸೂಕ್ತ ಬದಲಾವಣೆ ಮಾಡುವರು.

ಶ್ರೀ ಕಾಗೋಡು ತಿಮ್ಮಪ್ಪ.— ಆಗಬಹುದು ವಿದೇಶಗಳಲ್ಲಿ ವಿಜ್ಞಾನಿಗಳು ಪಂಡಿತರು ಇರುವರು. ಅವರು ತಮ್ಮ ಜ್ಞಾನವನ್ನು ರೂಢಿಸುವಾಗ ಸ್ವತಃ ಕೆಲಸ ಮಾಡುವರು. ಕೃಷಿ ಪ್ರೊಫೆಸರ್ ಇದ್ದಾರೆ. ಗದ್ದೆ ಉಳುವುದಕ್ಕೆ, ನಾಟಿ ಹಾಕುವುದಕ್ಕೆ ಅವರಿಗೆ ಬರುತ್ತದೆಯೋ ಅವರು ಕೇವಲ ಬುಕ್ ಪ್ರೊಫೆಸರ್ ಆಗಿದ್ದಾರೆ. ನಮ್ಮ ಜನ ಕನ್ನಡದಲ್ಲಿ ಓದಿ ತಿಳಿದು ಕೊಳ್ಳಬೇಕು. ನಿಮ್ಮ ಪ್ರೊಫೆಸರ್ ದೂರದಲ್ಲಿ ನಿಂತು ಹೇಳುವುದರಿಂದ ಕಾರ್ಯಗತ ಮಾಡುವಾಗ ವ್ಯವಸಾಯಗಾರರು ಅಡ್ಡದಾರಿ ಹಿಡಿಯಲು ಅವಕಾಶವಾಗಬಹುದು.

3-00 P.M.

ನಾನು ಈ ದಿವಸ ನೋಡಿದ್ದರಲ್ಲಿ ಈ ಗ್ರಾಮಸೇವಕರೆಂದೇನು ಕೆಲರು ಗ್ರಾಮ ಗ್ರಾಮಕ್ಕೆ ವ್ಯವಸಾಯಗಾರರಿಗೆ ಸಲಹೆಗಳನ್ನು ಕೊಡುವುದಕ್ಕೆ ಎಂದು ಬರುತ್ತಿದ್ದಾರೆ, ಅವರಲ್ಲಿ ನೂರಕ್ಕೆ ಐದು ಜನರಿಗೆ ಉಳುವುದಾಗಲಿ ಅಥವಾ ನಾಟಿ ಹಾಕುವುದಾಗಲಿ ಬರುವುದಿಲ್ಲ. ಆದಾಗ್ಯೂ ಅವರು ಬದುಗಳ ಮೇಲೆ ನಿಂತು ಜನರಿಗೆ ಭತ್ತದ ಪೈರನ್ನು ಒಂದು ಸಾಲಿಸಿಂದ ಇನ್ನೊಂದು ಸಾಲಿಗೆ ಇಷ್ಟು ಅಂತರ ಇಟ್ಟು ನಾಟಿ ಮಾಡಿ ಎಂದು ಅಷ್ಟನ್ನು ಮಾತ್ರ ಹೇಳುತ್ತಿದ್ದಾರೆ. ಆದರೆ ಅದನ್ನೇ ಅವರಿಗೆ ಸ್ವತಃ ಮಾಡಿ ತೋರಿಸುವುದಕ್ಕೆ ಬರುವುದಿಲ್ಲ. ಹೀಗಾಗಿ ನಮ್ಮ ಕೃಷಿ ವಿಜ್ಞಾನಿಗಳೇನಿದ್ದಾರೆ ಅವರೆಲ್ಲರೂ ಬರೀ ಪುಸ್ತಕದ ವಿಜ್ಞಾನಿಗಳಾಗಿದ್ದಾರೆ. ಅವರಿಗೆ ಸ್ವತಃ ಅನುಭವವೇನೂ ಇರುವುದಿಲ್ಲ.

ಆದುದರಿಂದ ನನಗೆ ಈ ಬಿಲ್ಲಿನ ಬಗ್ಗೆ ಇಷ್ಟು ಅನುಮಾನಗಳು ಬರುತ್ತಿವೆ. ಮಾನ್ಯ ಚನ್ನಬಸಪ್ಪನವರು ಹೇಳಿದ ಕೆಲವು ವಿಚಾರಗಳಿಂದ ನನಗೆ ಸ್ವಲ್ಪ ಸಮಾಧಾನ ಆದರು ನಾನು ಸರ್ಕಾರಕ್ಕೆ ರೈತರ ಹಿತದೃಷ್ಟಿಯಿಂದ ಒತ್ತಾಯ ಮಾಡುವುದೇನೆಂದರೆ ಇದನ್ನು ಇನ್ನೊಮ್ಮೆ ಆಮೂಲಾಗ್ರವಾಗಿ ಪರಿಶೀಲನೆ ಮಾಡಬೇಕೆಂದೂ, ನಮ್ಮ ಮಾನ್ಯ ಉಪಾಧ್ಯಕ್ಷರಿಗೆ ಈ ಹಾರ್ಟಿಕಲ್ಚರಿನ ಬಗ್ಗೆ ಆಳವಾದ ಅನುಭವ ಇರುವುದರಿಂದ ಅವರನ್ನೂ ಕರೆಸಿಕೊಂಡು ಸಮಾಲೋಚನೆ ಮಾಡಿ ಇದನ್ನು ಪುನರ್ವಿಮರ್ಶೆ ಮಾಡಿ ತರಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಎಮ್. ಭಾಂಗಿ (ಜಮಖಂಡಿ).— ಅಧ್ಯಕ್ಷರೇ, ಮಾನ್ಯ ಕೃಷಿ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಈ ಸೀಡ್ ಫಾರಂ ಮಸೂದೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ; ಮತ್ತು ಇದನ್ನು ಸ್ವಾಗತಿಸುತ್ತೇನೆ. ಆದರೆ ಈ ಸೀಡ್ ಫಾರಂ ಬಿಲ್ಲಿನಲ್ಲಿ ಹೆಚ್ಚಿಗೆ ಹಾರ್ಟಿಕಲ್ಚರಿಗೇ ಸಂಬಂಧ ಇರುವುದರಿಂದ ಇದರಿಂದೇನೂ ವ್ಯವಸಾಯಗಾರರಿಗೆ ಅಷ್ಟು ಹೆಚ್ಚಿನ ಪ್ರಯೋಜನ ಬೀಳುವುದಿಲ್ಲ. ಆದುದರಿಂದ ಈ ಮಸೂದೆಯಲ್ಲಿ ವ್ಯವಸಾಯಗಾರ್ರಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ಅವರನ್ನೂ ಕೂಡ ಇದರಲ್ಲಿ ಅಳವಡಿಸಿ ಒಂದು ಸಮಗ್ರ ಬಿಲ್ಲನ್ನು ಮಾಡಬೇಕೆಂದು ನಾನು ಈ ಒಂದು ಸಲಹೆ ಸರ್ಕಾರಕ್ಕೆ ಕೊಡಬಯಸುತ್ತೇನೆ. ಈ ದಿವಸ ನಮ್ಮ ಭಾಗದಲ್ಲಿ ಜೋಳ, ಕೆಂಜೋಳ ಮತ್ತು ಬಾಜ್ರ ಇವು ಇಂಪ್ರೂವ್ಡ್ ಥಳಿಯನ್ನು ಬಿತ್ತನೆ ಮಾಡಿದ ಕಡೆ ಆ ಬಿತ್ತನೆ ಮಾಡಿದ ಜಾಗದಿಂದ ೬೫೦ ಫೂಟ್ ದೂರದಲ್ಲಿ ಯಾರೂ ಅದೇ ಸಂಬಂಧವಾದ ಬಿತ್ತನೆ ಮಾಡಬಾರದೆಂದು ಒಂದು ನಿರ್ಬಂಧ ಹಾಕಿದರೆ ಒಳ್ಳೆಯದಾಗುತ್ತದೆ. ಈಗ ವ್ಯವಸಾಯಗಾರರಿಗೆ ಈ ಬಗ್ಗೆ ಯಾವ ವಿಧವಾದ ಒಂದು ರಕ್ಷಣೆಯನ್ನೂ ಸರ್ಕಾರದವರು ಕೊಟ್ಟಿಲ್ಲ. ಇಂಥ ರಕ್ಷಣೆ ಕೊಡತಕ್ಕ ಸಂಬಂಧವಾದ ಯಾವ ಒಂದು ಕಾಯಿದೆಯೂ ಇಲ್ಲಿಯತನಕ ಹೊರಟಿಲ್ಲ. ಅಲ್ಲದೆ ಈ ಬಿಲ್ಲಿನಲ್ಲಿ ಸರಕಾರದವರಿಗೇ ಒಂದು ಮನಾಪಲಿ ಪ್ರಾವಿಜನ್ ಇಟ್ಟುಕೊಳ್ಳಬೇಕು. ಅದನ್ನೂ ಸೈತಾ ಇದರಲ್ಲಿ ಹಾಕಿಲ್ಲ ಆದುದರಿಂದ ಈ ಮಸೂದೆಗೆ ಕೆಲವು ತಿದ್ದುಪಡಿಗಳಾಗಬೇಕಾದ್ದು ಅವಶ್ಯಕ.

ಇನ್ನು ಈ ಮಸೂದೆಯ ಕಲಂ ೪ರಲ್ಲಿ ಯಾರಾದರೂ ಸರಕಾರದವರು ಕೊಡತಕ್ಕ ಹುಕುಂಗೆ ವ್ಯತಿರಿಕ್ತವಾಗಿ ನಡೆದಲ್ಲಿ, ಬೆಳೆ ಇಟ್ಟಪಕ್ಷದಲ್ಲಿ ಅಂಥವರಿಗೆ ೫೦೦ ರೂಪಾಯಿಗಳ ದಂಡ ಹಾಕುವುದಕ್ಕೂ ಮತ್ತು ಅಂಥ ಬೆಳೆಯನ್ನು ಅಲ್ಲಿಂದ ಕಿತ್ತೊಗೆಯುವುದಕ್ಕೂ ಸರ್ಕಾರ ಅಧಿಕಾರ ಇಟ್ಟುಕೊಂಡಿದೆ. ಆದರೆ ಹಾಗೆ ರೈತನಿಗೆ ಅವನ ಬೆಳೆಯನ್ನು ಕಿತ್ತೊಗೆದಾಗ ಅವನಿಗೆ ಪರಿಹಾರ ಕೊಡಬೇಕಾದ್ದು ಅಗತ್ಯ. ಅದನ್ನೂ ಕೂಡ ಇದರಲ್ಲಿ ಅಡಕ ಮಾಡಬೇಕು. ಇನ್ನು ಮಾದರಿ ಬೆಳೆಯ ಬಿತ್ತನೆ ಬೀಜಗಳನ್ನು ತಯಾರಿಸತಕ್ಕ ರೈತನಿಗೆ ಒಂದು ರಕ್ಷಣೆ ಬೇಕು. ಆ ದೃಷ್ಟಿಯಿಂದ ಇದರಲ್ಲಿ ಒಂದು ಕಲಂ ಸೇರಿಸಬೇಕಾದ್ದು ಅವಶ್ಯಕ. ಆದುದರಿಂದ ಈ ಎಲ್ಲಾ ವಿಚಾರಗಳನ್ನು ಇದರಲ್ಲಿ

ಅಡಕಮಾಡತಕ್ಕ ಬಗ್ಗೆ ಕೆಲವು ತಿದ್ದುಪಡಿಗಳಾಗಬೇಕಾದ್ದು ಅಗತ್ಯ ಅದೆ; ಎಂದು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ಸೀಡ್ ಫಾರಂಗೆ ಅಗತ್ಯ ಇರುವುದರಿಂದ ಅದಕ್ಕೆ ಮನಾಪಲಿ ಮಾಡಿಲ್ಲ. ಅದನ್ನು ಮಾಡಬೇಕೆಂದು ಹೇಳಿ ನಾನು ಮಸೂದೆಯನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ) — ಸನ್ಮಾನ್ಯ ಸಭಾಪತಿಯವರೇ, ಸರ್ಕಾರದವರೇನು ಈ ದಿವಸ ಈ ಒಂದು ಸೀಡ್ ಫಾರಂ ಬಿಲ್ಲನ್ನು ತಂದಿದ್ದಾರೆ ನಿಜವಾಗಿಯೂ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಏಕೆಂದರೆ ಈ ದಿವಸ ನಾವು ಪ್ರಗತಿಪಥದಲ್ಲಿ ಸಾಗಬೇಕು. ಹಿಂದಿನ ಹಳೇ ಸಂಪ್ರದಾಯಗಳನ್ನು ಹೀಗೆ ಮುಂದುವರಿಸುತ್ತಾ ಹೋದರೆ ನಮಗೆ ಉತ್ತಮ ಬೀಜಗಳು ದೊರೆಯುದಕ್ಕೆ ತುಂಬಾ ಕಷ್ಟವಾಗುಗುತ್ತದೆ. ರೈತನಿಗೆ ಶ್ರಮಕ್ಕೆ ತಕ್ಕ ಫಲದೊರೆಯುದಿಲ್ಲ. ಆದರಿಂದ ರೈತನ ಕಸಬು ಲಾಭದಾಯಕ ರೀತಿಯಲ್ಲಿ ಸಾಗುವುದಕ್ಕೆ ಕಷ್ಟವಾಗುತ್ತದೆ. ಆದರೆ ಈ ದಿವಸ ನಮ್ಮಲ್ಲಿ ಕೆಲವು ಅಗ್ರಿಕಲ್ಚರಲ್ ಸೀಡ್ ಫಾರಂಗಳಿವೆ. ಅಲ್ಲಿ ಉತ್ತಮ ಥಳಿಯ ರಾಗಿ, ಭತ್ತ ಮತ್ತು ಜೋಳ ಇತ್ಯಾದಿಗಳನ್ನು ತಯಾರಿಸುತ್ತಾರೆ. ಅಷ್ಟೇ ಅಲ್ಲದೆ ಸರ್ಕಾರದವರು ಹೀಗೆ ಏನೊಂದು ಉತ್ತಮ ಬೀಜಗಳನ್ನು ತಯಾರಿಸುತ್ತಿದ್ದಾರೆ ಅದೇ ಮಾರ್ಗದಲ್ಲಿ ಕೆಲವು ಖಾಸಗೀಜನರೂ ಈ ಬಿತ್ತನೆ ಬೀಜಗಳನ್ನು ತಯಾರಿಸುತ್ತಿದ್ದಾರೆ. ನಾವು ಸರ್ಕಾರಿ ಫಾರಂಗೆ ಹೋಗಿ ಉತ್ತಮ ಬಿತ್ತನೆ ಬೀಜಗಳನ್ನು ಕೇಳಿದರೆ ಅವರು ಖಾಸಗೀ ಜನರೇನು ಇವನ್ನು ತಯಾರಿಸುತ್ತಿದ್ದಾರೆ ಅವರತ್ತ ಕೈ ತೋರಿಸುತ್ತಾರೆ. ಆದರೆ ಅದರಂತೆ ಈ ಹಾರ್ಟಿಕಲ್ಚರಲ್ ಸೀಡ್ ಫಾರಂ ಆಗಬಾರದೆಂದು ನಾನು ಹೇಳುತ್ತಿದ್ದೇನೆ. ಜನರು ಸರ್ಕಾರಿ ಫಾರಂಗಳಲ್ಲಿ ಉತ್ತಮ ದರ್ಜೆಯ ಬಿತ್ತನೆ ಬೀಜಗಳು ಸಿಕ್ಕುತ್ತವೆ ಎಂದು ಹೋದಾಗ ಅವರು ಇಲ್ಲ ಎಂದರೆ ರೈತರಿಗೆ ಬಹಳ ನಿರಾಶೆಯಾಗುತ್ತದೆ. ಹಾಗಾಗಬಾರದು. ನಾವು ಅವುಗಳಿಗೆ ಲಕ್ಷಗಟ್ಟಲೆ ಹಣವನ್ನು ಹಾಕಿ ಅಲ್ಲಿ ಹೆಚ್ಚಿನ ಶಿಬ್ಬಂದಿವರ್ಗ ಇಟ್ಟಿರುವಾಗ ಅವರು ಹೀಗೆ ಖಾಸಗೀ ಜನರತ್ತ ಕೈ ತೋರಿಸುವುದು ಸರಿಯಲ್ಲ. ಅದರಿಂದ ಹಣವನ್ನು ಖರ್ಚುಮಾಡಿದ ಉದ್ದೇಶ ಸಾರ್ಥಕವೂ ಆಗಲಿಲ್ಲ. ಆದುದರಿಂದ ಈ ಹಾರ್ಟಿಕಲ್ಚರಲ್ ಸೀಡ್ ಫಾರಂ ಏನಿದೆ ಇದು ಹಾಗಾಗದಿರಲೆಂದು ಸೂಚನೆ ಮಾಡುತ್ತಿದ್ದೇನೆ.

ಈಗ ನಮ್ಮ ಕೆಲವು ಸ್ನೇಹಿತರು ಅಡಿಕೆ ತೆಂಗಿನ ಗಿಡಗಳ ವಿಚಾರ ಹೇಳಿದರು. ಅದೇ ಸಮಸ್ಯೆ ತರಕಾರಿ ಬೆಳೆಗೂ ಇದೆ. ಆದುದರಿಂದ ಕೆಲವರು ಈ ಉತ್ತಮ ಥಳಿಯ ಬಿತ್ತನೆಯನ್ನು ಹಾಳು ಮಾಡಬೇಕೆಂಬ ದುರುದ್ದೇಶದಿಂದಲೇ ಕೆಲವು ಸಮಾಜ ಕಂಟಕರು, ಸಮಾಜ ಘಾತುಕರು ಅದರ ಹತ್ತಿರದಲ್ಲೇ ಬೇರೆ ಬೆಳೆಯನ್ನು ಹಾಕಿ ಅದನ್ನು ಕೆಡಿಸುತ್ತಿದ್ದಾರೆ. ಆದುದರಿಂದ ಈ ಒಂದು ನಿರ್ಬಂಧವನ್ನು ಹಾಕುವುದು ಬಹಳ ಒಳ್ಳೆಯದು. ಹೀಗೆ ಕಾನೂನಿಗೆ ವಿರೋಧವಾಗಿ ವರ್ತಿಸತಕ್ಕವರಿಗೆ ದಂಡ ಹಾಕತಕ್ಕ ಹಾಗೂ ಶಿಕ್ಷೆ ವಿಧಿಸುವುದನ್ನು ಆನೇ ಕಲಂನಲ್ಲಿ ಹೇಳಿದ್ದಾರೆ ಇದರ ಬಗ್ಗೆ ಇನ್ನೂ ಉಗ್ರ ಶಿಕ್ಷೆವಿಧಿಸುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಇನ್ನು ಖಾಸಗೀ ಜನರಿಗೂ ಇದನ್ನು ಬೆಳೆಸುವುದಕ್ಕೆ ಅವಕಾಶ ಮಾಡಿದ್ದಾರೆ. ಆದರೆ ಅಂಥ ಜನರು ಸರ್ಕಾರದಲ್ಲಿ ತಮ್ಮ ಹೆಸರನ್ನು ರಿಜಿಷ್ಟರ್ ಮಾಡಿಸಿ ಸರ್ಕಾರ ದಿಂದ ಲೈಸೆನ್ಸ್ ಪಡೆದು ಈ ಉತ್ತಮ ಬೀಜ ತಯಾರಿಸುವಂತೆ ಮಾಡುವುದು ಅಗತ್ಯ. ಮತ್ತು ಸರ್ಕಾರ ಅವರಿಗೆ ಧನಸಹಾಯ ಕೂಡ ಒದಗಿಸಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ. ಅಲ್ಲಿಗೆ ಸರ್ಕಾರದ ಅಧಿಕಾರಿಗಳನ್ನು ಮೇಲ್ವಿಚಾರಕರನ್ನಾಗಿ ಹಾಕ ಬೇಕು. ಅಂತಹ ಕಡೆ ಖಾಸಗೀಯವರಿಗೆ ಅವಕಾಶ ಕೊಟ್ಟರೆ ಸರಿಹೋಗುವುದಿಲ್ಲ. ಸರ್ಕಾರದ ಅಧಿಕಾರಿಗಳು ಹೋಗಿ ಅದನ್ನು ಪರೀಕ್ಷೆ ಮಾಡದೆ ಹೋದರೆ ತಜ್ಞರು ಉದಾಸೀನವಾಗಿ ಏನಾದರೂ ಒಂದು ಸರ್ಟಿಫಿಕೇಟನ್ನು ಕೊಟ್ಟರೆ ಅದರ ಮುಖಾಂ ತರ ಹಣವನ್ನು ಸಂಪಾದನೆ ಮಾಡುತ್ತಾರೆ. ಅಂತಹವರು ಅನೇಕ ಸಂದರ್ಭಗಳಲ್ಲಿ ಜನಗಳಿಂದ ಡಿಮ್ಯಾಂಡ್ ಬಂದಾಗ ಕೆಲಸಕ್ಕೆ ಬಾರದೇ ಇರುವ ಬೀಜಗಳನ್ನು ಮಾರಾಟ ಮಾಡಿ ಹಣವನ್ನು ಸಂಪಾದನೆ ಮಾಡಿರುವುದೂ ಉಂಟು. ಕಳೆದ ೮-೧೦ ವರ್ಷಗಳಿಂದಲೂ ರೈತರಲ್ಲಿ ಅನೆ ಕರು ಸರಿಯಾದಂಥ ಮೇಜ್ ಸೀಡ್‌ಗಳನ್ನು ಸರಬರಾಜು ಮಾಡದೇ ಇರುವುದರಿಂದ ತಮ್ಮ ಬೆಳೆಗಳನ್ನು ನಾಶಪಡಿಸಿಕೊಂಡು ಸಾಲಗಾರರಾಗಿ ರೈತ ಸಾಕಷ್ಟು ಬೆಳೆಯನ್ನು ಬೆಳೆಯದೇ ಫೇಲ್ಯೂರ್ ಆಗಿ ಕಂಗಾಲ ರಾಗಿದ್ದಾರೆ ಒಂದೊಂದು ಸಂದರ್ಭದಲ್ಲಿ ಹೈಬ್ರಿಡ್ ಬೀಜಗಳಲ್ಲಿ ಕೆಲವು ವೈರೆಟಿಗಳಿಂದ ರೈತರು ಒಳ್ಳೆಯ ಫಸಲನ್ನು ತೆಗೆದಿದ್ದಾರೆ. ಇಂಥಾದ್ದನ್ನೂ ಕೂಡ ನಂಬಲು ಸಾಧ್ಯ ವಿಲ್ಲವೆಂದು ಕೆಲವು ಸಂದರ್ಭಗಳಲ್ಲಿ ತಜ್ಞರು ಹೇಳುತ್ತಾ ಕೆಲಸಕ್ಕೆ ಬಾರದೇ ಇರು ವಂಥ ಬೀಜಗಳನ್ನು ಸರ್ಟಿಫೈ ಮಾಡುವುದರಿಂದ ಅಂತಹ ತಜ್ಞರು ಅನೇಕ ಸಂದರ್ಭ ಗಳಲ್ಲಿ ಸಮಯಕ್ಕೆ ಬಂದಹಾಗೆ ನಡೆಯುವುದರಿಂದ, ಅಂತಹವರನ್ನು ಇದರಲ್ಲಿ ಸೇರಿಸುವುದು ಸರಿಯಲ್ಲ. ಇಂತಹವರಿಂದ ಏನಾದರೂ ಅನ್ಯಾಯಗಳು ಆದರೆ ಸಂಬಂಧಪಟ್ಟ ಅಧಿಕಾರಿಗಳೇ ಆಗಲೀ ಅವರಿಂದ ಪಡೆದಂಥ ಸರ್ಟಿಫಿಕೇಟಿನಿಂದ ಕೆಲಸಕ್ಕೆ ಬಾರದೇ ಇರುವ ಬೀಜಗಳನ್ನು ಖಾಸಗೀಯವರ ಸೀಡ್ ಫಾರಂಗಳಿಂದ ಕೊಂಡಿದ್ದೇ ಆದರೆ, ಅಂತಹವರಿಗೆ ನಿಜವಾಗಿ ಹೆಚ್ಚಿಗೆ ಶಿಕ್ಷೆಯನ್ನು ವಿಧಿಸುವುದನ್ನು ಇದರೊಳಗೆ ಅಳವಡಿಸಬೇಕು. ಅಂತಹವರು ಯಾವುದೋ ಒಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಾರೆ. ಅದಕ್ಕೆ ಅವಕಾಶವನ್ನು ಕೊಡಕೂಡದು. ನಾನು ನೋಡಿ ರುವ ಹಾಗೆ ತೆಂಗು, ಅಡಿಕೆ, ಬಾಳೆ—ಇವು ಬಹಳ ದೀರ್ಘಕಾಲ ಬಾಳತಕ್ಕದ್ದು. ಅದನ್ನು ಒಂದುಸಾರಿ ಬೆಳೆಸಿದ ಮೇಲೆ ಅದನ್ನು ಕಿತ್ತುಹಾಕುವುದಕ್ಕೆ ಆಗುವುದಿಲ್ಲ. ಆದರೆ ರಾಗಿ, ಬತ್ತ ಮುಂತಾದುವು ಕೇವಲ ೩-೪ ತಿಂಗಳ ಬೆಳೆಗಳು. ಅವನ್ನು ಯಾವಾಗ ಬೇಕಾದರೂ ಕಿತ್ತುಹಾಕಬಹುದು. ಆದರೆ ತೆಂಗು, ಅಡಿಕೆ, ಬಾಳೆ— ಈ ಗಿಡಗಳು ದೀರ್ಘಾವಧಿ ಬಾಳತಕ್ಕವು. ಈ ಫಸಲುಗಳನ್ನು ನಾವು ತಕ್ಷಣ ಕಿತ್ತು ಹಾಕುವುದಕ್ಕಾಗುವುದಿಲ್ಲ. ಬದಲಾಯಿಸುವುದಕ್ಕೂ ಆಗುವುದಿಲ್ಲ ಆದ್ದರಿಂದ ಇಂತಹ ಫಾರಂಗಳನ್ನು ಮಾಡುವಾಗ ಉತ್ತಮವಾದಂಥ ಸಸಿಗಳನ್ನು ತಯಾರು ಮಾಡದೇ ಸಸಿಗಳಲ್ಲಿ ಸಾರವಿಲ್ಲದೆ ಇರತಕ್ಕವುಗಳನ್ನು ರೈತರಿಗೆ ಕೊಟ್ಟದ್ದೇ ಆದರೆ, ಅಂತಹವರ

ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಗಮನವನ್ನು ಕೊಡದೇ ಹೋದರೆ, ಅವನ್ನು ಸರಬರಾಜು ಮಾಡುವಂಥ ಖಾಸಗೀ ಸೀಡ್ ಫಾರಂಗಳ ಓನರ್‌ಗಳನ್ನೂ ಸಹ ಶಿಕ್ಷೆ ಮಾಡುವಂಥ ಒಂದು ಕಾನೂನು ಇದರಲ್ಲಿ ಅಳವಡಿಸಬೇಕು. ಆಗ ಅವರು ಭಯದಿಂದ ಕೆಲಸಗಳನ್ನು ನಿರ್ವಹಿಸುತ್ತಾರೆ. ಮುಂದೆ ಉತ್ತಮವಾದಂಥ ಸಸಿಗಳನ್ನೂ ಕೊಡುತ್ತಾರೆ. ತೆಂಗಿನ ಸಸಿಗಳನ್ನೂ ಸಹ ಚೆನ್ನಾಗಿ ನರ್ಸರಿಮಾಡಿ ರೈತರಿಗೆ ಸರಬರಾಜು ಮಾಡುತ್ತಾರ. ನಾನು ಯಾವ ಡೈರೆಕ್ಟರನ್ನೂ ಆಕ್ಷೇಪಣೆ ಮಾಡುತ್ತಾ ಇಲ್ಲ. ಲಕ್ಷಾಂತರ ಕಾಯಿಗಳನ್ನು ಕೊಂಡುಕೊಳ್ಳಬೇಕಾದರೆ ಕೇವಲ ಡೈರೆಕ್ಟರ್ ಆಗಿರುವವರೇ ಹೋಗುವುದಿಲ್ಲ ಪ್ರತಿಯೊಂದು ಕಾಯಿಯನ್ನೇ ಆಗಲೀ ಅಥವಾ ತೆಂಗಿನ ಸಸಿಯನ್ನಾಗಲಿ ಅವರೊಬ್ಬರೇ ಇನ್‌ಸ್ಪೆಕ್ಷನ್ ಮಾಡುವುದಕ್ಕಾಗುವುದಿಲ್ಲ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಬಿತ್ತನೆ ಬೀಜಗಳನ್ನು ಸೆಲೆಕ್ಟ್ ಮಾಡುವುದಕ್ಕಾಗಲೀ ಅಥವಾ ಉತ್ತಮವಾದಂಥ ಸಸಿಗಳನ್ನು ಆಯ್ಕೆ ಮಾಡುವುದಕ್ಕಾಗಲೀ ಕಳುಹಿಸಿದಾಗ ಅವರು ಎಲ್ಲೋ ಒಂದು ಕಡೆ ಕೂತುಕೊಂಡು ಉದಾಸೀನದಿಂದ ಯಾವುದೋ ಒಂದು ಸಸಿಯನ್ನು ಕೆಲಸಕ್ಕೆ ಬಾರದೇ ಇರುವಂಥಾದ್ದನ್ನು ಕೊಡುವುದು ಸರಿಯಲ್ಲ. ಅನೇಕ ಜನಗಲ್ಲಿ ಸರ್ಕಾರೀ ಫಾರಂಗಳಲ್ಲಿ ಏನು ಈ ಸಸಿಗಳನ್ನು ಬೆಳೆಸುತ್ತಾರೋ ಅವು ಉತ್ತಮವಾದಂಥ ಸಸಿಗಳಲ್ಲ ಎಂಬ ಅಪನಂಬಿಕೆ ಉಂಟಾಗಿದೆ. ಆದ್ದರಿಂದಲೇ ಖಾಸಗೀಯವರು ಅವರ ಸ್ವಂತಕ್ಕೆ ಹಾಕಿಕೊಂಡಿರುವ ಕಡೆಗಳಿಂದ ಅಂತಹ ಸಸಿಗಳನ್ನು ತೆಗೆದುಕೊಂಡು ಬರುತ್ತಿದ್ದಾರೆ. ಅವು ಮುಂದೆ ಬಹಳ ಉತ್ತಮ ಸಸಿಗಳಾಗಿ ಬೆಳೆಯುತ್ತವೆ. ಇದರಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರದ ಸಸಿಗಳನ್ನು ತೆಗೆದುಕೊಳ್ಳದೆ ಖಾಸಗೀಯವರು ಅವರ ಸ್ವಂತವಾಗಿ ಬೆಳೆಸಿದಂಥ ಸಸಿಗಳನ್ನು ಕೊಂಡುಕೊಳ್ಳುವುದಕ್ಕೆ ಜನರು ಹೋಗುತ್ತಿದ್ದಾರೆಂಬುದು ಮನವರಿಕೆಯಾಗಬೇಕು ಆ ಒಂದು ಭೀತಿ ಅವರಿಗೆ ಹೋಗಬೇಕು. ನಿಜವಾಗಿ ಸರ್ಕಾರೀ ಫಾರಂಗಳಲ್ಲಿ ಕಡಿಮೆ ದುಡ್ಡಿನಲ್ಲಿ ಇಂತಹ ಸಸಿಗಳನ್ನು ಪಡೆಯಬಹುದು. ಅವನ್ನು ಉತ್ತಮ ಸಸಿಗಳನ್ನಾಗಿ ಬೆಳೆಸಬಹುದೆಂಬ ನಂಬಿಕೆ ಈಗಿನ ಸನ್ನಿವೇಶದಲ್ಲಿ ಜನಗಳಿಗೆ ಬರಬೇಕು. ಸರ್ಕಾರದ ಫಾರಂಗಳಲ್ಲಿಯೂ ಸಹ ಖಾಸಗೀಯವರು ಬೆಳೆಸುವ ಉತ್ತಮ ಸಸಿಗಳಂತೆ ಬೆಳೆದು ಅಂತಹ ಉತ್ತಮವಾದ ಸಸಿಗಳನ್ನು ಜನರಿಗೆ ಸರಬರಾಜು ಮಾಡಲು ಸರ್ವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಆದರೆ ನನ್ನ ಉದ್ದೇಶ ಸರ್ಕಾರದ ಫಾರಂಗಳಲ್ಲಿಯೂ ಬಹಳ ಉತ್ತಮವಾದಂಥ ಸಸಿಗಳನ್ನು ಪಡೆಯಬೇಕೆಂಬುದು. ನಮ್ಮ ದೇಶದಲ್ಲಿ ಹೆಚ್ಚುಹೆಚ್ಚಾಗಿ ಉತ್ತಮವಾದ ಫಸಲನ್ನು ಕೊಡತಕ್ಕ ಸಸಿಗಳನ್ನು ಬೆಳೆಯಬೇಕಾಗಿದೆ. ಆದರೆ ಈ ಕಾರ್ಯವನ್ನು ಕಾರ್ಯರೂಪಕ್ಕೆ ತರುವಾಗ ಅದರ ಉದ್ದೇಶ ಕೆಟ್ಟದ್ದು ಆಗಬಾರದು, ಕಾರ್ಯಾಚರಣೆಯೂ ಕೆಟ್ಟದ್ದು ಆಗಬಾರದೆಂದು ನನ್ನ ಆಶೆ. ಸರ್ಕಾರದವರು ಈಗ ಏನೊಂದು ಹೆಬ್ಬಯಕೆಯನ್ನು ಇಟ್ಟುಕೊಂಡು ಈಗ ಈ ಸೀಡ್ ಫಾರಂಗಳನ್ನು ಮಾಡುತ್ತಿದ್ದಾರೋ ಅದನ್ನು ಬೆಳೆಸುವಾಗ ಅದರ ಬೆಳವಣಿಗೆಯಲ್ಲಿ ಕುಂಠಿತವಾಗಬಾರದು. ಕೆಲಸಕ್ಕೆ ಬಾರದೇ ಇರತಕ್ಕ

ಸಸಿಗಳು ಸಿಕ್ಕಿ ಜನರು ನಿರಾಶರಾಗಬಾರದು. ಅಗ್ರಿಕಲ್ಚರಲ್ ಸೀಡ್ ಫಾರಂಗಳಲ್ಲಿ ಮತ್ತು ಹಾರ್ಟಿಕಲ್ಚರಲ್ ಸೀಡ್ ಫಾರಂಗಳಲ್ಲಿ ಇವುಗಳ ಬೆಳವಣಿಗೆಯ ಬಗ್ಗೆ ಕುಂಠಿತ ಕೆಲಸವಾಗಬಾರದು. ನನ್ನ ಮಿತ್ರರು ಹೇಳಿದ ಹಾಗೆ ಅಲ್ಲಿ ಅಧಿಕಾರಿಗಳಾಗಿರುವವರು ತಿಂಗಳಾದರೆ ಸಂಬಳ ಬಂದುಬಿಡುತ್ತದೆ, ಈ ಸಸಿ ಬೆಳೆದರೇನು, ಬೆಳೆಯದಿದ್ದರೇನೆಂದು ಅಸಡ್ಡೆಯಿಂದ ವರ್ತಿಸಬಾರದು. ಲಾಭದಾಯಕವಾಗಿ ಕೆಲಸ ಮಾಡದೇ ಹೋದಪಕ್ಷದಲ್ಲಿ ಅವುಗಳಿಂದ ನಿರೀಕ್ಷಿಸಿದಷ್ಟು ಫಸಲು ಬಾರದೇ ಹೋದ ಪಕ್ಷದಲ್ಲಿ ಆದಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಮೇಲೂ ಉಗ್ರವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬ ಕಾನೂನನ್ನು ಸರ್ಕಾರದವರು ಇದರಲ್ಲಿ ಅಳವಡಿಸಬೇಕು. ಆಗಲಾದರೂ ಹೆಚ್ಚಿನ ಭಯದಿಂದಲಾದರೂ ಚೆನ್ನಾಗಿ ಕೆಲಸ ಮಾಡಿ ನಮ್ಮ ಜನರಿಗೆ ಉತ್ತಮವಾದಂಥ ಸಸಿಗಳನ್ನು ಒದಗಿಸಿಕೊಡುತ್ತಾರೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅವು ಫಸಲು ಕೊಡುವುದು ಸ್ವಲ್ಪ ಮಟ್ಟಿಗೆ ನಿಧಾನವಾದರೂ ಉತ್ತಮವಾದಂಥ ಸಸಿಗಳನ್ನು ರೈತರು ಪಡೆಯಬೇಕು. ಆಗ ಬಹಳ ಸಂತೋಷವಾಗುತ್ತದೆ. ಏಕೆಂದರೆ ನಾವು ಈಗ ಏನೊಂದು ಪ್ರಗತಿಯನ್ನು ಈ ಸಸಿಗಳನ್ನು ಬೆಳೆಸುವುದರಿಂದ ಪಡೆಯಬೇಕೆಂದು ಹೋಗುತ್ತೇವೋ ಅದಕ್ಕೆ ಅನುಗುಣವಾಗಿ ನಮಗೆ ಉತ್ತಮವಾದಂಥ ಸಸಿಗಳು ಸಿಕ್ಕಿದರೆ ನಾವು ನಿಜವಾಗಿಯೂ ನಮ್ಮ ತೋಟಗಾರಿಕೆಯನ್ನು ಸುಧಾರಿಸುವುದಕ್ಕೆ ಅವಕಾಶವಾಗುತ್ತದೆ. ನಾವು ನಮ್ಮ ಈ ಕೆಲಸಗಳನ್ನು ಜಾಗ್ರತೆಯಾಗಿ ಪೂರೈಕೆ ಮಾಡುವುದಾದರೆ ಅಂತಹ ಉತ್ತಮವಾದಂಥ ಸಸಿಗಳನ್ನು ಬೆಳೆಯುವಂಥ ಫಾರಂಗಳು ಬಂದರೆ ಬಹಳ ಒಳ್ಳೆಯದು. ಜನರಲ್ಲಿಯೂ ಉತ್ತಮವಾದಂಥ ಫಾರಂಗಳನ್ನು ಬೆಳೆಸಬೇಕೆಂಬ ಆಶೆ ಆಕಾಂಕ್ಷೆಯೂ ಹೆಚ್ಚುತ್ತದೆ ಹಾರ್ಟಿಕಲ್ಚರನ್ನು ಡೆವಲಪ್ ಮಾಡುವುದೂ ಕೂಡ ಜಾಸ್ತಿಯಾಗುತ್ತದೆ. ನಿಜವಾಗಿಯೂ ಅಂತಹ ಒಂದು ಒಳ್ಳೆಯ ಕಾಲ ಬಂದು ನಮ್ಮ ದೇಶದಲ್ಲಿ ಉತ್ತಮವಾದಂಥ ಸಸಿಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಹೆಚ್ಚಿಗೆ ಪ್ರಯತ್ನ ಮಾಡುತ್ತಾರೆಂದು ಹೇಳಿ, ಈ ಒಂದು ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).— ಮಾನ್ಯ ಅಧ್ಯಕ್ಷರೇ, ಗೌರವಿಸೇ ಮೈಸೂರು ಸೀಡ್ ಫಾರಂಗಳ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ನನಗೊಂದು ಭಯ ಬಂದಿದೆ. ಈ ಸಂದರ್ಭದಲ್ಲಿ ನನಗೆ ರಕ್ತಬೀಜಾಸುರನ ಕಥೆಯೊಂದು ಜ್ಞಾಪಕಕ್ಕೆ ಬರುತ್ತಿದೆ. ಹಿಂದೆ ಆತನ ಮೈಯಿಂದ ಒಂದು ತೊಟ್ಟು ರಕ್ತ ಬಿದ್ದಕೂಡಲೇ ನೂರಾರು ಜನ ರಾಕ್ಷಸರು ಹುಟ್ಟಿದರಂತೆ. ಹಾಗೆ ಇವರು ಕೊಡತಕ್ಕ ಬೀಜದಿಂದ ಎಲ್ಲಿ ನೂರಾರು ಗೊಡ್ಡು ವಂಶಗಳು ಹುಟ್ಟುತ್ತವೋ ಎನ್ನುವುದು ನನ್ನ ಭಯ. ಆದ್ದರಿಂದ ಮಾನ್ಯ ಸಚಿವರು ಇಂಥಾದ್ದಕ್ಕೆ ಅವಕಾಶ

ವನ್ನು ಇಲ್ಲಿ ಕೊಡದೆ ತುಂಬಾ ಜಾಗೃತಿಯಿಂದ ನೋಡಬೇಕೆಂದು ನಾನು ಈ ಸಂದರ್ಭದಲ್ಲಿ ಅವರಿಗೆ ಎಚ್ಚರಿಕೆಯನ್ನು ಕೊಡುತ್ತೇನೆ. ಏಕೆಂದರೆ ನಮ್ಮ ಊರಿನಲ್ಲಿ ಒಂದು ಕೋಕೋನಟ್ ರಿಸರ್ಚ್ ಫಾರಂ ಇದೆ. ಅದು ಸುಮಾರು ೨೦ ವರ್ಷಗಳಿಂದಲೂ ಇದೆ. ಅಲ್ಲಿ ತೆಂಗಿನ ಸಸಿಯನ್ನು ಒಬ್ಬರಿಗೆ ಕೊಟ್ಟಿದ್ದಾರೆ. ಬಹಳ ಬೆಲೆಯಾದಂಥಾದ್ದು ಎಂದು ಹೇಳಿ ಕೊಟ್ಟಿದ್ದರೂ ಅದರಿಂದ ಏನೂ ಫಲ ಬರದೆ ಕೊಟ್ಟ ಹಣ ಅವರಿಗೆ ನಷ್ಟವಾಯಿತು. ಅನೇಕ ವರ್ಷಗಳಿಂದಲೂ ಒಂದು ಕಾಯನ್ನು ಬಿಟ್ಟಿಲ್ಲ. ಅಲ್ಲಿನ ಫಾರಂನಲ್ಲಿ ಏನು ಮಾಡುತ್ತಾರೆಂದರೆ, ಆ ಏರಿಯಾದ ಒಬ್ಬ ಪ್ರತಿಭಾವಂತ ಮನುಷ್ಯನ ಮೂಲಕ ೪೦೦ ರೂಪಾಯಿಗಳು ಮಾರ್ಕೆಟ್ ರೇಟ್ ಇದ್ದರೆ, ಒಳ್ಳೆಯ ಬೀಜದ ತೆಂಗಿನ ಸಸಿಯನ್ನು ಹಾಕಿಸುತ್ತೇವೆಂದು ಹೇಳಿ ೬೦೦ ರೂಪಾಯಿಗಳಿಗೆ ಕಾಯಿ ಕೊಳ್ಳುತ್ತಾರೆ. ಈ ಕಾಯಿ ಕೇವಲ ಕಡೆ ದರ್ಜೆಯ ಕಾಯಿಗಳು ಇದರಿಂದ ಅವನಿಗೆ ಸುಮಾರು ೨೦೦ ರೂಪಾಯಿಗಳಷ್ಟು ಕಮಿಷನ್ ಹೊಡೆದುಕೊಳ್ಳುತ್ತಾನೆ. ಹಿಂದೆ ನಾನೇ ನೋಡಿದ ಹಾಗೆ ಮಧ್ಯಮ ವರ್ಗದ ಹಾಗೂ ಕೆಳವರ್ಗದ ತೆಂಗಿನ ಸಸಿಯನ್ನು ಕೇವಲ ೮ ಆಣೆಯಂತೆ ಮಾರುತ್ತಿದ್ದರು. ಈಗ ಬೆಲೆ ಜಾಸ್ತಿಯಾಗಿದೆ. ಸುಮಾರು ೨–೩೦ ರೂಪಾಯಿ ಆಗಿದೆ. ತಮಗೆ ನಾನು ಒಂದು ಉದಾಹರಣೆಯನ್ನು ಬೇಕಾದರೆ ಕೊಡುತ್ತೇನೆ ಅಲ್ಲಿದ್ದ ಒಬ್ಬ ಅಧಿಕಾರಿಯ ಹೆಸರನ್ನು ಬೇಕಾದರೆ ಹೇಳುತ್ತೇನೆ. ಅಲ್ಲಿನ ಹಾಸನ ಜಿಲ್ಲಾಧಿಕಾರಿಗಳು ಒಂದು ಸಾರಿ ೨ ಸಾವಿರ ತೆಂಗಿನ ಸಸಿಗಳನ್ನು ತೆಗೆದುಕೊಂಡರೂ ಒಂದು ಸಸಿಯೂ ಸರಿಯಾಗಿ ಹುಟ್ಟಲಿಲ್ಲ. ಆಗ ಆ ಫಾರಮ್ಮಿನ ಅಧಿಕಾರಿಯೊಬ್ಬರು ಹೋಗಿ ಜಿಲ್ಲಾಧಿಕಾರಿಗೆ, ಸ್ವಾಮಿ ದಯಮಾಡಿ ಇದನ್ನು ಯಾರಿಗೂ ತಿಳಿಸಬೇಡಿ, ನಿಮಗೆ ಒಳ್ಳೆಯ ಉತ್ತಮವಾದ ಬೀಜದ ಸಸಿಯನ್ನು ಕೊಡುತ್ತೇನೆ. ನೀವೆಲ್ಲೋ ಸರಿಯಾಗಿ ಗೊಬ್ಬರ ಹಾಕಿಲ್ಲ, ಸರಿಯಾಗಿ ಗುಂಡಿ ತೆಗೆದಿಲ್ಲವೆಂದು ಹೇಳಿ ಅವರ ಮುಖಕ್ಕೆ ಮಸಿ ಬಳಿದಿರುವಂತಹ ನಿದರ್ಶನವಿದು. ಹಾಗೆಯೇ ಇನ್ನೊಂದು ಉದಾಹರಣೆಯನ್ನು ಬೇಕಾದರೆ ಹೇಳುತ್ತೇನೆ. ನಿಮ್ಮ ಹಾರ್ಟಿಕಲ್‌ಚರಲ್ ಡಿಪಾರ್ಟಿಮೆಂಟಿನಲ್ಲಿ ಒಬ್ಬ ಮಾನ್ಯ ಶ್ರೀ ವಿಷಕಂಠ ಎಂಬ ಅಧಿಕಾರಿ ಸುಮಾರು ಮೂರು ವರ್ಷಗಳ ಹಿಂದೆ ಮಾಜೀ ಶಾಸಕರೊಬ್ಬರಿಗೆ ಹೈಬ್ರಿಡ್ ಆಲೂಗಡ್ಡೆ ಬೀಜ ಕೊಟ್ಟರು. ಅದಕ್ಕೆ ಅವರು ಸುಮಾರು ಅದಕ್ಕಾಗಿ ೯ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಮೂರು ಎಕರೆ ಜಮೀನಿನಲ್ಲಿ ಬೆಳೆದರೂ ಒಂದು ಆಲೂಗಡ್ಡೆ ಸಹ ಹುಟ್ಟಿಲ್ಲ. ಕೊನೆಗೆ ಈ ಶಾಸನಸಭೆಯ ಸೀಟನ್ನು ಕಳೆದುಕೊಂಡು ತುಂಬಾ ಬಡತನಕ್ಕೆ ಸಿಕ್ಕಿಹಾಕಿಕೊಂಡು ಕೊನೆಗೆ ಅವರು ಮನೆಯಲ್ಲಿ ಹೆಣ್ಣುಮಕ್ಕಳ ಮದುವೆ ಮಾಡುವುದಕ್ಕೂ ಬಹಳ ತೊಂದರೆಪಟ್ಟು ಮುಂದಿನ ವರ್ಷದಿಂದ ಈ ಆಲೂಗಡ್ಡೆಯ ತಂಟೆ ಬೇಡವೆಂದು ಹೇಳಿ ಕೇವಲ ೧೦೦ ರೂಪಾಯಿಗಳನ್ನು ಅವರು ಕೊಡುವುದಕ್ಕಾಗದೆ ಅನೇಕ ಸಾಲಗಾರರು ತಿರುಗಿ ತಿರುಗಿ ಕೊನೆಗೆ ಸೋತುಹೋದರು. ಇಂತಹ ಹಾರ್ಟಿಕಲ್‌ಚರಲ್ ಫಾರಂಗಳು ಆದರೆ ಇದರಿಂದೇನು ಪ್ರಯೋಜನವಾಗುತ್ತದೆಂಬುದನ್ನು ಯೋಚನೆಮಾಡಿ.

ಈ ಎಳೆವಾರೆಯಲ್ಲಿ ಒಂದು ಸೀಡ್ ಫಾರಂ ಇದೆ. ಅದು ಸ್ಥಾಪನೆಯಾಗಿ ೨೦ ವರ್ಷವಾಗಿದೆ. ಆ ಸೀಡ್ ಫಾರಂನಲ್ಲಿ ಎಷ್ಟು ಜನ ರೈತರಿಗೆ ಉತ್ತಮವಾದ ಬೀಜವನ್ನು ಕೊಟ್ಟಿದ್ದಾರೆ? ಆ ಮೇಲೆ ಶ್ರೀಮಾನ್ ಚನ್ನಪ್ಪನವರು ಮತ್ತು ಕಾಗೋಡು ತಿಮ್ಮಪ್ಪನವರು ಹೇಳಿದಂತಹ ಎರಡು ವಿಷಯಗಳನ್ನು ನಾನು ಸಮರ್ಥನೆ ಮಾಡುತ್ತೇನೆ. ಬಾಳೆಗಿಡ, ಟೊಮ್ಯಾಟೋ ಬದನೇಕಾಯಿಗಿಡ, ಹುರುಳಿಕಾಯಿ ಮುಂತಾದವುಗಳ ಸೀಡ್ ಫಾರಂಗಳನ್ನು ಮಾಡಿಕೊಳ್ಳಿ. ತೆಂಗಿನಗಿಡ ಏನಿದೆ ಇದು ನೂರಾರು ವರ್ಷಗಳ ತನಕ ಬೆಳೆ ಕೊಡುವ ಗಿಡ. ಇದು ಸುಮಾರು ೧೦೦ ವರ್ಷಗಳ ವರೆಗೂ ಇರುತ್ತದೆ. ಈ ಗಿಡವನ್ನು ರೈತ ಬೆಳೆಸುವುದಕ್ಕೆ ಒಳ್ಳೆಯ ಫಸಲನ್ನು ಕೊಡದೇ ಇರತಕ್ಕ ಟಿ. ಬಿ. ಪೇಷಂಟಿನ ಹಾಗೆ ಎರಡು ರೆಕ್ಕೆ ಇರತಕ್ಕ ತೆಂಗಿನ ಸಸಿಯನ್ನು ರೈತನಿಗೆ ಸೀಡ್‌ಫಾರಮ್‌ನವರು ಕೊಟ್ಟರೆ ಅವನ ಗತಿ ಏನಾಗಬೇಕು ಎಂಬುದನ್ನು ಯೋಚನೆ ಮಾಡಿ. ಸರ್ಕಾರದ ಗಿಡಕ್ಕೆ ಎರಡು ರೆಕ್ಕೆ ಇರುತ್ತೆ ಕ್ಷಯ ರೋಗಿ ತರಹ ಇರುತ್ತೆ. ಅಡಿಕೆ ಸಸಿ ಬಹಳ ಕಡಿಮೆ ವಯಸ್ಸಿನಲ್ಲಿಯೇ ಬಿದ್ದು ಹೋಗುತ್ತದೆ. ಆದರೆ ತೆಂಗಿನ ಮರ ೬೦–೮೦, ೧೨೦ ವರ್ಷಗಳವರೆಗೂ ಇರುತ್ತದೆ. ಅವರು ಹಾಕಿದ ಗಿಡ ಮೊಮ್ಮಕ್ಕಳು ಇರುವವರೆಗೆ ಬರುತ್ತೆ. ಈಗ ನಮ್ಮಲ್ಲಿ ಹೆಣ್ಣು ಗಂಡು ಸಂಬಂಧವನ್ನು ಮಾಡಬೇಕಾಗಿದ್ದರೆ ಅವರ ವಂಶ, ಎಂಥಾದ್ದು ಅವರ ಬುಡ ಎಂಥಾದ್ದು ಅವರ ಅಪ್ಪ ಅಜ್ಜಿ ಎಂಥಹವರು ಇತ್ಯಾದಿ ಮೂಲಗಳನ್ನೆಲ್ಲಾ ನೋಡಿ ಮದುವೆ ಮಾಡಿಕೊಳ್ಳುತ್ತಾರೆ. ಅದೇ ರೀತಿ ಯಾರಾದರೂ ಒಬ್ಬ ರೈತ ತೆಂಗಿನ ಸಸಿಯನ್ನು ತೆಗೆದುಕೊಂಡು ಹೋಗಬೇಕಾದರೆ ಆ ತೆಂಗಿನ ಸಸಿ ಯಾವ ತೋಟದ್ದು, ಅಲ್ಲಿ ಎಷ್ಟು ತೆಂಗಿನ ಮರಗಳು ಇವೆ, ಕೊಬ್ಬರಿ ಒಂದು ಸಾವಿರಕ್ಕೆ ಎಷ್ಟು ಮಣ ಆಗುತ್ತದೆ ಇವುಗಳನ್ನೆಲ್ಲ ನೋಡಿಕೊಂಡು ತೆಂಗಿನ ಸಸಿಯನ್ನು ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಸೀಡ್ ಫಾರಂನಲ್ಲಿರತಕ್ಕ ಅಧಿಕಾರಗಳು ದೇಶದ ದೃಷ್ಟಿಯಿಂದ ಜನತೆಯ ದೃಷ್ಟಿಯಿಂದ ಒಳ್ಳೆಯ ಬೀಜ ಮತ್ತು ಒಳ್ಳೆಯ ತೆಂಗಿನ ಸಸಿಗಳನ್ನು ಬೆಳೆದು ರೈತರಿಗೆ ಒದಗಿಸಬೇಕು ಎಂದು ನಾನು ಹೇಳುತ್ತೇನೆ. ನಾನು ಇವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಯಾವುದೇ ಒಂದು ಕಾನೂನನ್ನು ಈ ಅಸೆಂಬ್ಲಿಯಲ್ಲಿ ಮಾನ್ಯ ಮಂತ್ರಿಗಳು ತಂದು ಪಾಸು ಮಾಡಿದಮೇಲೆ ಅದನ್ನು ಇಂಪ್ಲಿಮೆಂಟ್ ಮಾಡುವವರು ಮಂತ್ರಿಗಳಲ್ಲ. ಮಂತ್ರಿಗಳು ಈ ಕಾನೂನನ್ನು ಅಧಿಕಾರಿಗಳ ಕೈಯಲ್ಲಿ ಕೊಟ್ಟು ಇಂಪ್ಲಿಮೆಂಟ್ ಮಾಡುವುದಕ್ಕೆ ಹೇಳುತ್ತಾರೆ. ಆದ್ದರಿಂದ ಇವನ್ನು ಇಂಪ್ಲಿಮೆಂಟ್ ಮಾಡುವಾಗ ಅಧಿಕಾರಿಗಳಿಗೆ ನಿಷ್ಠೆ ಇರಬೇಕು. ಅವರಿಗೆ ಸಹೃದಯತೆ ಇರಬೇಕು. ದೇಶದ ಜನ ನಮ್ಮವರು ಎನ್ನುವ ಅಭಿಮಾನ ಅವರಿಗೆ ಇರಬೇಕು. ಅಂಥಾ ಅಧಿಕಾರಿಗಳು ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ ಎನ್ನತಕ್ಕ ಬಗ್ಗೆ ಒಂದು ವೋಟ್ ತೆಗೆದುಕೊಳ್ಳಿ ಆಗ ತಮಗೆ ಗೊತ್ತಾಗುತ್ತದೆ. ಈಗ ನಮ್ಮ ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಇರತಕ್ಕಂಥಾ ನಿಷ್ಠೆಯಲ್ಲಿ ಈ ಅಧಿಕಾರಿಗಳಿಗೆ ಒಂದು ಸಾವಿರದಲ್ಲಿ ಒಂದು ಪಾಲು ಕೂಡ ಇಲ್ಲ.

ಆದ್ದರಿಂದ ಈ ಮಸೂದೆಯ ವ್ಯಾಪ್ತಿಯಲ್ಲಿ ಬರತಕ್ಕ ಬೀಜ ಹಾಗೂ ಸಸಿಗಳಲ್ಲಿ ನೂರಾರು ವರ್ಷ ಫಸಲು ಕೊಡತಕ್ಕಂಥ ತೆಂಗು ಮತ್ತು ಮಾವು ಇತ್ಯಾದಿ ಸಸಿಗಳನ್ನು ಇದರ ವ್ಯಾಪ್ತಿಯಿಂದ ತೆಗೆದು ಹಾಕಬೇಕು. ಒಂದುವೇಳೆ ಅವುಗಳನ್ನು ಇದರಿಂದ ಎಲಿಮಿನೇಟ್ ಮಾಡದೇ ಹೋದರೆ ಕಾಂಪಿಟಿಟೀವ್ ಬಿಜಿನೆಸ್ ಮಾಡುವುದಕ್ಕೆ ಬಿಡಿ. ಅದನ್ನು ಬೆಳೆಯುವವಕ್ಕೆ ಏರಿಯಾ ರಿಸ್ಟ್ರಿಕ್ಷನ್ ಇರುವುದನ್ನು ತೆಗೆಯಿರಿ. ಆ ಕೆಲಸವನ್ನು ಸಿಷ್ಠಾವಂತ ರೈತ ಮಾಡಿಕೊಳ್ಳುತ್ತಾನೆ. ನೂರಾರು ವರ್ಷ ಫಲ ಕೊಡತಕ್ಕಂಥಾ ತೆಂಗು ಮತ್ತು ಮಾವಿನ ಗಿಡಗಳನ್ನು ಬೆಳೆಸತಕ್ಕ ಕೆಲಸವನ್ನು ರೈತನೇ ಮಾಡಿಕೊಳ್ಳುತ್ತಾನೆ. ಆದ್ದರಿಂದ ಅವನಿಗೆ ಅವಕಾಶವನ್ನು ಕೊಡಿ. ಅವನಿಗೆ ಭಯ ಇರುತ್ತದೆ. ನಾಳೆ ಒಂದುವೇಳೆ ಅವನು ಒಳ್ಳೆಯ ಗಿಡವನ್ನು ರೈತನಿಗೆ ಕೊಡದೇ ಹೋದರೆ ಯಾರೋ ನಮಗೆ ಕೆಟ್ಟ ಸಸಿಯನ್ನು ಕೊಟ್ಟ ಎಂದು ಅವನನ್ನು ಶಪಿಸುತ್ತಾರೆ ಎಂದು ನಿಷ್ಠೆಯಿಂದ ಒಳ್ಳೆಯ ಸಸಿಯನ್ನು ಬೆಳೆಸಿ ಬೇರೆಯವರಿಗೆ ಅವನು ಮಾರುತ್ತಾನೆ. ಈ ದೃಷ್ಟಿಯಿಂದ ಖಾಸಗೀ ಬಿತ್ತನೆ ಬೀಜ ಕ್ಷೇತ್ರಗಳಿಗೆ ಅವಕಾಶ ಇರಬೇಕು. ಆದರೆ ಅಧಿಕಾರಿಗಳು ನಾವು ದುಡ್ಡು ಮಾಡಿಕೊಂಡರೆ ಸಾಕು ಎಂದು ಯಾವುದೋ ಒಂದು ಸಸಿಯನ್ನು ಫಾರಂನಲ್ಲಿ ಬೆಳೆದು ರೈತನಿಗೆ ಕೊಡುತ್ತಾರೆ. ಅವನು ಅಲ್ಲಿ ಸಾಕಷ್ಟು ದುಡ್ಡು ಮಾಡಿಕೊಂಡು ಮೇಲೆ ತನಗೋ ತನ್ನ ಮನೆಯವರಿಗೋ ಖಾಯಿಲೆ ಆಗಿದೆ ಬೆಂಗಳೂರು ಆಸ್ಪತ್ರೆಯಲ್ಲಿ ಸೇರಬೇಕು ನನಗೆ ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಅವನು ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋದರೆ ಅಲ್ಲಿಗೆ ಮುಗಿದು ಹೋಯಿತು. ಈ ರೀತಿಯಾಗಿ ಅಧಿಕಾರಿಗಳು ನಿಷ್ಠೆಯಿಂದ ಕೆಲಸ ಮಾಡುವದಿಲ್ಲ ಎಂದು ನಾನು ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟ್ ಸೀಡ್ ಫಾರಂನಲ್ಲಿ ಬೆಳೆದಂತಹ ಬೀಜಗಳನ್ನು ಗ್ರಾಮಾಂತರ ಪ್ರದೇಶದ ಜನಗಳಿಗೆ ಸರ್ಕಾರದವರು ಯಾವರೀತಿ ಹಂಚುತ್ತೀರಿ? ಈಗ ತಾಲ್ಲೂಕು ಮಟ್ಟದಲ್ಲಿರತಕ್ಕ ಹಾರ್ಟಿಕಲ್‌ಚರಲ್ ಆಫೀಸುಗಳಲ್ಲಿ ಕೆಲವು ಆಫೀಸರುಗಳ ಕ್ವಾರ್ಟರ್ಸ್ ಮುಂದೆ ಬೆಳೆದಿರತಕ್ಕ ಯಾವುದೋ ತರಕಾರಿ ಬೀಜಗಳನ್ನು ತಂದು ನಾಲ್ಕು ಆಣೆಗೆ ಒಂದು ಪಾಕೆಟ್‌ನಂತೆ ಮಾರಾಟ ಮಾಡುತ್ತಾರೆ. ನಾನು ಅದನ್ನು ತಂದು ಸ್ವಂತ ತೋಟದಲ್ಲಿ ಹಾಕಿದೆ ಆ ಬೀಜಗಳು ಹುಟ್ಟಲೇ ಇಲ್ಲ. ಆ ಮೇಲೆ ಈ ಬೀಜವನ್ನು ಕೊಟ್ಟ ತಾಲ್ಲೂಕು ಹಾರ್ಟಿಕಲ್‌ಚರಲ್ ಆಫೀಸಿನಲ್ಲಿ ವಿಚಾರಿಸಿದಾಗ ಬೀಜವನ್ನು ಹಾಕುವ ಸ್ಥಳದಲ್ಲಿ ೬ ಅಡಿ ಮಣ್ಣು ಅಗೆಯಬೇಕು, ಬೇರೆ ಮಣ್ಣನ್ನು ಅಲ್ಲಿ ತಂದು ಹಾಕಬೇಕು ಗೊಬ್ಬರ ಹಾಕಬೇಕು ನಂತರ ಬೀಜವನ್ನು ಹಾಕಬೇಕು ಆಗ ಬೀಜಗಳು ಹುಟ್ಟುತ್ತವೆ ಎಂದು ಹೇಳಿದರು. ಅದು ಒಂದು ಗಾರ್ಡನ್ ಅಲ್ಲಿ ೬ ಅಡಿ ಅಗೆಯಬೇಕು ಎಂದರೆ ಹೇಗೆ? ಆಮೇಲೆ ನಾನು ಬೆಂಗಳೂರಿಗೆ ಬಂದು ಮಾವಳ್ಳಿ ಟಿಫಿನ್ ರೂಮಿನ ಪಕ್ಕದಲ್ಲಿರತಕ್ಕ ಪ್ರೈವೇಟ್ ಫಾರಂನಲ್ಲಿ ಬೀಜಗಳನ್ನು ತೆಗೆದುಕೊಂಡು ಹೋಗಿ ಹಾಕಿದೆ. ೬ ಅಡಿ ನೆಲವನ್ನು ಅಗಿಯಲೂ ಇಲ್ಲ ಏನೂ ಮಾಡಲಿಲ್ಲ. ಆದರೆ ಬೀಜ ಒಳ್ಳೆಯ ಸೊಗಸಾಗಿ ಹುಟ್ಟಿತು. ಆದರೆ ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟಿನಲ್ಲಿ

ಕವರಿನಲ್ಲಿ ಹಾಕಿ ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟ ಎಂದು ಸೀಲ್ ಒತ್ತಿರುತ್ತಾರೆ. ಆದರೆ ಅವರು ಕೊಟ್ಟಂತಹ ಬೀಜ ಸರಿಯಾಗಿ ಹುಟ್ಟುವುದಿಲ್ಲ. ಆದ್ದರಿಂದ ಈ ಕಾನೂನು ಜಾರಿಗೆ ತರಬೇಕಾದರೆ ಮೊದಲು ಈ ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟನ್ನು ಓವರ್ ಆಯಿಲ್ ಮಾಡಬೇಕು. ತುಕ್ಕು ಹಿಡಿದಿರುವ ಈ ಇಲಾಖೆಗೆ ಲೂಬ್ರಿಕೇಟ್ ಮಾಡಬೇಕು. ಆ ಮೇಲೆ ಇದನ್ನು ಜಾರಿಗೆ ತರಬೇಕು. ಈ ಈಲಾಖೆಯವರು ಕಟ್ಟ ಬೀಜಗಳನ್ನು ರೈತರಿಗೆ ಹಂಚುತ್ತಿದ್ದಾರೆ, ಆದ್ದರಿಂದ ಇದನ್ನು ಸರಿಪಡಿಸಬೇಕು. ಈಗ ನಮ್ಮ ರಾಜ್ಯದಲ್ಲಿರತಕ್ಕ ಕೋಕನಟ್ ರಿಸರ್ಚ ಸ್ಟೇಶನ್‌ನಲ್ಲಿ ಮಲೆಯ ಸೀಡ್, ಸಿಂಗಪುರ ಸೀಡ್ ಫಿಲಿಫೈನ ಸಿಡ್ ಮುಂತಾದ ಬೀಜಗಳನ್ನು ಏನು ತರಿಸುತ್ತಿದ್ದಾರೆ ಅವುಗಳನ್ನು ಟ್ರೈಲ್ ನೋಡಿ ತೆಂಗಿನ ಗಿಡಗಳನ್ನು ಬೆಳೆದು ನೋಡಿ ಒಳ್ಳೆಯ ಗಿಡಗಳನ್ನು ರೈತರಿಗೆ ಹಂಚುತ್ತಾ ಇಲ್ಲ. ಅನೇಕ ವರ್ಷಗಳಿಂದ ಪ್ರಯೋಗ ನಡೆಯುತ್ತಿದೆ. ಇನ್ನೂ ಪ್ರಯೋಗವೇ ಆದರೆ ರೈತರಿಗೆ ಬೀಜದ ಗತಿಯೇನು? ಈ ದೃಷ್ಟಿಯಿಂದ ಈ ರಿಸರ್ಚ ಸ್ಟೇಷನ್‌ಗಳಲ್ಲಿ ಮೊದಲು ಒಳ್ಳೆಯ ಬೀಜಗಳನ್ನು ಹಾಕಿ ಬೆಳೆದು ಅವು ಸರಿಯಾಗಿ ಚನ್ನಾಗಿ ಬೆಳೆದರೆ ಆಗ ಅಂಥಾ ಗಿಡಗಳನ್ನು ರೈತರಿಗೆ ಹಂಚುವಂತಹ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ತೆಂಗಿನ ಬೆಳೆಯ ಅಭಿವೃದ್ಧಿಗಾಗಿ ಅಗ್ರಿಕಲ್‌ಚರಲ್ ರೀಫೈನಾನ್ಸ ಕಾರ್ಪೋರೇಷನ್ನಿನವರು ರೈತರಿಗೆ ಸಾಲ ಕೊಡತಕ್ಕ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಈ ಅಗ್ರಿಕಲ್‌ಚರ್ ರೀಫೈನಾನ್ಸ ಕಾರ್ಪೋರೇಷನ್ನಿನವರ ಕಂಡೀಷನ್ ಏನು ಎಂದರೆ ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟಿನಿಂದ ತೆಂಗಿನ ಸಸಿಗಳನ್ನು ತೆಗೆದುಕೊಂಡಿದ್ದರೆ ಮಾತ್ರ ಸಾಲವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ನನ್ನದು ೧೨ ಎಕರೆ ಜಮೀನು ಇದೆ. ಅದರಲ್ಲಿ ತೆಂಗಿನ ಗಿಡ ಸಮೃದ್ಧಿಯಾಗಿ ಬೆಳೆದಿದೆ. ೧೦೦ ತೆಂಗಿನ ಗಿಡಕ್ಕೆ ೧೫ ಸಾವಿರ ತೆಂಗಿನಕಾಯಿ ಬಿಡುತ್ತದೆ. ನನ್ನ ತಮ್ಮನ ಜಮೀನು ನನ್ನ ಜಮೀನಿನ ಪಕ್ಕದಲ್ಲಿಯೇ ಇದೆ. ಅಲ್ಲಿ ತೆಂಗು ಬೆಳೆಯುವುದಕ್ಕೆ ನನ್ನ ತಮ್ಮ ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟಿಗೆ ಅರ್ಜಿಯನ್ನು ಕೊಟ್ಟಾಗ ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟಿನ ಸೂಪರಿಂಟೆಂಡೆಂಟ ಆ ಜಮೀನನ್ನು ನೋಡಿ ಆ ಜಮೀನು ತೆಂಗಿನ ಸಸಿಯನ್ನು ಹಾಕುವುದಕ್ಕೆ ಅನ್‌ಫಿಟ್ ಎಂದು ಬರೆದು ಹೊರಟು ಹೋದರು. ಅದಕ್ಕೆ ಕಾರಣವೇನೆಂದರೆ ಆ ಸೂಪರಿಂಟೆಂಡೆಂಟ ಅಲ್ಲಿಗೆ ಬಂದಾಗ ಅವರನ್ನು ಸರಿಯಾಗಿ ನೋಡಿಕೊಂಡು ಅವರಿಗೆ ಟಿ.ಬಿ.ಯಲ್ಲಿ ಒಳ್ಳೆಯ ಊಟವನ್ನು ಹಾಕಿಸಿ, ಚಾಪಿಸು ತಿನ್ನಿಸಿ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದರೆ ಸಾಲವನ್ನು ಮಂಜೂರು ಮಾಡುವದಕ್ಕೆ ಶಿಫಾರಸ್ಸು ಮಾಡುತ್ತಿದ್ದರು. ಆ ರೀತಿ ಮಾಡದೆ ಇದ್ದುದರಿಂದ ನನ್ನ ತಮ್ಮನಿಗೆ ಸಾಲವನ್ನು ಮಂಜೂರು ಮಾಡಲಿಲ್ಲ. ಆದ್ದರಿಂದ ನಾನು ನೊಂದ ಹೃದಯದಿಂದ ಹೇಳುತ್ತಿದ್ದೇನೆ. ಮೊದಲು ಈ ಹಾರ್ಟಿಕಲ್‌ಚರಲ್ ಇಲಾಖೆ ಪರಿಶುದ್ಧವಾಗಬೇಕು. ನಂತರ ಈ ಸೀಡ್ ಫಾರಂ ಆಕ್ಟನ್ನು ತರುವುದಾದರೆ ಅದನ್ನು ದೇಶದ ಮೂಲೆ ಮೂಲೆಯಲ್ಲಿರತಕ್ಕ ಪ್ರತಿಯೊಬ್ಬ ರೈತನೂ ಸಂತೋಷದಿಂದ ಸ್ವಾಗತಿಸುತ್ತಾನೆ.

ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟಿನವರು ವೆರೈಟಿ ಸೀಡ್ ಫಾರಂ ಮಾಡಿದ ಮೇಲೆ ಬೀಜವನ್ನು ರೈತರಿಗೆ ಯಾವರೀತಿ ಹಂಚಿಕೆ ಮಾಡುತ್ತಾರೆ ಎನ್ನುವದು ಈ ಮಸೂದೆಯಲ್ಲಿ ಕಂಡು ಬರುವುದಿಲ್ಲ. ಅದನ್ನು ಸರ್ಕಾರದವರು ಹೇಗೆ ಮಾಡುತ್ತಾರೆ ಎನ್ನುವದನ್ನು ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಬೇಕು. ಈಗ ಇರತಕ್ಕ ಪದ್ಧತಿಯ ಪ್ರಕಾರ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮುಖಾಂತರ ವೆರೈಟಿ ಸೀಡ್ ಅನ್ನು ಹಂಚಿಕೆ ಮಾಡುತ್ತಿದ್ದಾರೆ. ಅದು ಬಿಟ್ಟರೆ ಕೆಲವೊಂದು ಮಾರ್ಕೆಟಿಂಗ ಸೊಸೈಟಿಗಳ ಮುಖಾಂತರವೂ ರೈತರಿಗೆ ಬೀಜವನ್ನು ಹಂಚಿಕೆ ಮಾಡುತ್ತಿದ್ದಾರೆ. ಈ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಉತ್ತಮ ತಳಿ ಬೀಜವನ್ನು ಸರಬರಾಜು ಮಾಡುವಾಗ ನನ್ನ ತಾಲ್ಲೂಕಿನಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು ಹೆಚ್ಚು ಬೀಜಗಳನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆದರೆ ಯಾವ ರೈತರಿಗೂ ಅವರು ಬೀಜವನ್ನು ಸರಿಯಾಗಿ ಹಂಚಿಕೆ ಮಾಡುತ್ತಿಲ್ಲ.

3-30 P. M.

ಇದಕ್ಕೆ 'ನೀವು' ಏನು ಮಾಡಿದ್ದೀರಾ ಎಂದರೆ, ಒಂದು ಸೊಸೈಟಿ ಮಾಡಿ, ಅದರ ಮೂಲಕ ಹಂಚಿಕೆ ಮಾಡುವ ವ್ಯವಸ್ಥೆ ಮಾಡಿದ್ದೀರಿ. ಅಂದರೆ ರೈತರೇ ಸೇರಿಕೊಂಡು ಒಂದು ಸೊಸೈಟಿ ಮಾಡಿಕೊಂಡರೆ, ಅದರ ಮೂಲಕ ಹಂಚಬೇಕೆಂದು ಮಾಡಿದ್ದೀರಿ. ಈ ಒಂದು ವ್ಯವಸ್ಥೆ ಯಾವ ರೀತಿಯಿದೆ ಎಂದರೆ, ಶ್ರೀಮತಿ ಇವಾವಾಜ್ ಅವರು ಹಂಚುತ್ತಿರುವ ರೇಷನ್ ಜನರಿಗೆ ಯಾವ ರೀತಿ ಸೊಸೈಟಿಗಳ ಮೂಲಕ ಹೋಗುತ್ತಿದೆಯೋ ಅದೇ ರೀತಿ ಇದೂ ಸಹ ಇದೆ. ಮುಖ್ಯವಾಗಿ ಈಗ ನಡೆಯುತ್ತಿರುವ ಅನ್ಯಾಯಗಳನ್ನು ಸರಿ ಮಾಡಿ ನಂತರ ಈ ಬಿಲ್‌ನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನ್ನಿಸುತ್ತದೆ. ನಮ್ಮ ರೈತರ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಬಹುದಿನಗಳ ವರೆಗೆ ಇರುವ ತೆಂಗಿನಸಸಿ, ಮಾವಿನಸಸಿ, ಹಲಸಿನ ಸಸಿ ಇವುಗಳ ಬಗ್ಗೆ ಈ ಆಕ್ಟ್‌ನಲ್ಲಿ ಹೇಳಿರುವುದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ತಾವು ಯಾವುದನ್ನೂ ಕಡ್ಡಾಯ ಮಾಡುವುದಕ್ಕೆ ಹೋಗಬೇಡಿ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಬೇಕಾದರೆ ತಾವು ನನ್ನ ತಾಲ್ಲೂಕ್‌ಗೆ ಬನ್ನಿ; ಅಲ್ಲಿ ಬಡ ರೈತರು ನರ್ಸರಿ ಮಾಡಿಕೊಂಡು ಬೆಳೆಸಿರುವ ಸಸಿಗಳು ಏನಿವೆ, ಅವುಗಳು ಒಳ್ಳೆಯ ಬೀಜಗಳಲ್ಲ ಎಂದು ನೀವು ಪ್ರೂವ್ ಮಾಡಿದರೆ, ನೀವು ಕೇಳಿದ ದಂಡ ಕೊಡುತ್ತೇನೆ. ಕೆಟ್ಟ ಸಸಿಗಳನ್ನು ಬೆಳೆಸಿದರೆ ಅದರಿಂದ ತಮ್ಮ ವಂಶಕ್ಕೆ ಕೇಡಕಾಗುತ್ತದೆ ಮತ್ತು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಕೇಡಕಾಗುತ್ತದೆಂಬ ಭಯ ರೈತರಿಗೆ ಇರುವುದರಿಂದ ಅವರು ಒಳ್ಳೆಯ ಸಸಿಗಳನ್ನೇ ಬೆಳೆಸುತ್ತಾರೆ. ಆದರೆ ಈ ಒಂದು ಭಯ ನಿಮ್ಮ ಅಧಿಕಾರಿಗಳಿಗೆ ಇಲ್ಲ. ಆದಕಾರಣ ಇದರ ಬಗ್ಗೆ ತಾವು ಪುನರ್ ಪರ್ಯಾಲೋಚನೆ ಮಾಡುವುದು ಒಳ್ಳೆಯದು. ಈಗ ನೀವು ತಂದಿರುವ ಮೈಸೂರು ಸೀಡ್ ಫಾರಮ್ಸ್ ಬಿಲ್ ಏನಿದೆ, ಇದನ್ನು ಕೆಲವು ಭಾಗಗಳಿಗೆ ಮಾತ್ರ ಬೇಕಾದರೆ ಸೀಮಿತ ಮಾಡಿ. ನೂರಾರು ವರ್ಷಗಳ ವರೆಗೆ ಇರುವ ಸಸಿಗಳನು

ಬೆಳೆಸುವ ವಿಚಾರದಲ್ಲಿ ಕಾಂಪಿಟಿಷನ್ ಇದ್ದರೆ ಒಳ್ಳೆಯದು. ಇದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಈಗ ತಮ್ಮ ಜವಾಬ್ದಾರಿಯನ್ನು ಅರಿಯದೆ ಇರತಕ್ಕಂಥ ಅಧಿಕಾರಿಗಳು ಏನಿದ್ದಾರೆ ಮತ್ತು ಸರ್ಕಾರದ ಕಳಕಳಿಯನ್ನು ಅರಿತುಕೊಳ್ಳದೆ ಸ್ವಾರ್ಥವನ್ನು ಸಾಧನೆ ಮಾಡಿಕೊಳ್ಳುವ ಅಧಿಕಾರಿಗಳು ಏನಿದ್ದಾರೆ, ಅವರನ್ನು ಮೊದಲು ತಾವು ಸರಿ ಮಾಡಿ; ಇಲ್ಲದೆ ಹೋದರೆ ಇದರಿಂದ ಯಾವ ಅನುಕೂಲವೂ ರೈತರಿಗೆ ಆಗುವುದಿಲ್ಲ. If you cannot mend them, end them and then bring this Act into force ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. Deputy Speaker in the Chair

†ಶ್ರೀ ಟಿ. ಆರ್. ಶ್ಯಾಮಣ್ಣ (ಕೋಟೆ).— ಮಾನ್ಯ ಅಧ್ಯಕ್ಷರೆ, ನನಗೆ ವ್ಯವಸಾಯದ ವಿಚಾರ ಸ್ವಲ್ಪ ಗೊತ್ತಿದ್ದರೂ ಕೂಡ ನಾನು ವ್ಯವಸಾಯಗಾರನಲ್ಲ. ಆದರೂ ಇಲ್ಲಿ ನನಗೆ ಬಂದಿರುವ ಮುಖ್ಯವಾದ ಅನುಮಾನ ಏನೆಂದರೆ, ಸೆಕ್ಷನ್ ಎರಡರಲ್ಲಿ

> "seed" means any of the classes of seeds used for sowing or planting and includes seedlings and tubers, bulbs, rhizomes, roots, cuttings, all types of grafts and other vegetatively propagated material.

ಎಂದು ಹೇಳಿದ್ದಾರೆ. ಆದ್ದರಿಂದ ಸೀಡ್ ಎನ್ನುವ ಡೆಫನಿಷನ್‌ನಲ್ಲಿ ಯಾವುದು ಬೇಕಾದರೂ ಆಗಬಹುದು.

ಶ್ರೀ ಕೆ. ಎಚ್. ಪಾಟೀಲ್.— ಹೈಕ್ವಾಲಿಟಿ ಸೀಡ್‌ಗೆ ಡೆಫನಿಷನ್ ಕೊಟ್ಟಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.— ನಾನು ಇದರ ಬಗ್ಗೆ ಮಾತನಾಡಬೇಕಾದಂಥ ಪ್ರಮೇಯ ಇಷ್ಟೆ; ಇಂದು ಬೆಂಗಳೂರು ನಗರದಲ್ಲಿ ಅನೇಕ ನರ್ಸರಿಗಳಿವೆ. ಈ ನರ್ಸರಿಗಳು ಇಡೀ ಭಾರತದಲ್ಲಿಯೇ ಹೆಸರು ಪಡೆದಿವೆ. ಆದ್ದರಿಂದ ಬೇರೆ ಬೇರೆ ದೇಶದವರು ಇಲ್ಲಿಗೆ ಬಂದು ತಮಗೆ ಬೇಕಾದುದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಬನಶಂಕರಿಯ ಹತ್ತಿರ ಒಂದು ಸೈಂಟಿಫಿಕ್ ನರ್ಸರಿ ಇದೆ. ಅದು ಎಷ್ಟು ಆಕರ್ಷಕವಾಗಿದೆ ಎಂದರೆ, ನಮ್ಮ ಸರ್ಕಾರದವರು ಸಹ ಅಷ್ಟೊಂದು ಆಕರ್ಷಕವಾದ ನರ್ಸರಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ನಂಬಿಕೆ ನನಗೆ ಪೂರ್ಣವಾಗಿ ಇದೆ. ಹೊಸ ವೈದ್ಯನಿಗಿಂತ ಹಳೆಯ ರೋಗಿ ಉತ್ತಮ ಎನ್ನುವ ಗಾದೆ ಈಗ ನನಗೆ ನೆನಪಿಗೆ ಬರುತ್ತಿದೆ. ಏಕೆಂದರೆ, ರೈತನಾದವನಿಗೆ ಯಾವ ಜಮೀನಿನಲ್ಲಿ ಯಾವ ಬೀಜವನ್ನು ಹಾಕಬೇಕು, ಯಾವ ಬೆಳೆ ತೆಗೆಯಬೇಕು ಎಂಬುದು ಚೆನ್ನಾಗಿ ಗೊತ್ತಿರುತ್ತದೆ. ಈ ಒಂದು ಅನುಭವ ಅಧಿಕಾರಿಗಳಲ್ಲಿ ಇರುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ವೃತ್ತಿಯಲ್ಲಿ ಇಂಜಿನಿಯರಿಂಗ್ ಗ್ರ್ಯಾಜ್ಯುಯೇಟ್ ಅಲ್ಲ.

ಆದರೂ ಸಹ ಅನೇಕರು ನನ್ನನ್ನು ಹುಡುಕಿಕೊಂಡು ಬಂದು ಕಟ್ಟಡ ಕಟ್ಟಿಸಿ ಕೊಡ ಬೇಕೆಂದು ಅಡ್ವಾನ್ಸಾಗಿ ಹಣ ಕೊಟ್ಟು ಹೋಗುತ್ತಾರೆ. ಇಂದು ಅನೇಕ ಇಂಜಿ ನಿಯರ್‌ಗಳಿಗೆ ಮೂಲೆ ಮಟ್ಟ ಹಿಡಿಯುವುದಕ್ಕೆ ಬರುವುದಿಲ್ಲ. ಇಂಜಿನಿಯರ್‌ಗಳಾದ ನಮಗೇ ಕೆಲಸ ಸಿಗುತ್ತಿಲ್ಲ. ನಿಮಗೆ ಯಾವ ರೀತಿ ಕೆಲಸ ಸಿಗುತ್ತದೆ ಎಂದು ಕೆಲವು ಇಂಜಿನಿಯರ್‌ಗಳು ಕಪ್ಲೈಂಟ್ ಸಹ ಮಾಡಿದ್ದಾರೆ. ಮುಖ್ಯವಾಗಿ ಕೆಲಸದಲ್ಲಿ ಶ್ರದ್ಧೆ ಇರಬೇಕೆಂದು ನನ್ನ ಅಭಿಪ್ರಾಯ. ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳು ವುದೇನೆಂದರೆ, ಸರ್ಕಾರದವರು ಉತ್ತಮವಾದ ತಳಿಗಳನ್ನು ಬೆಳೆಸುವ ಬಗ್ಗೆ ಮತ್ತು ಅದಕ್ಕೆ ಪ್ರೋತ್ಸಾಹ ಕೊಡುವುದರ ಬಗ್ಗೆ ನನ್ನ ಅಡ್ಡಿಯೇನೂ ಇಲ್ಲ. ಆದರೆ ನನ್ನ ಮುಖ್ಯವಾದ ಅಡ್ಡಿ ಏನೆಂದರೆ, ಯಾರಾದರು ಖಾಸಗಿಯಾಗಿ ಸರಿಯಾದ ರೀತಿಯಲ್ಲಿ ತಳಿಗಳನ್ನು ಬೆಳೆಸುವುದಕ್ಕೆ ಹೊರಟಿದ್ದರೆ ಅದಕ್ಕೆ ಅಡ್ಡಿ ಮಾಡುವುದು ಸರಿಯಲ್ಲ ಎಂಬುದು. ಉತ್ತಮವಾದಂಥ ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೆ ಖಾಸಗಿಯವ ರಿಗೂ ಅನುಕೂಲ ಮಾಡಿಕೊಡಬೇಕು ಜೊತೆಗೆ ಸರ್ಕಾರದವರು ಸಹ ಉತ್ಪತ್ತಿ ಮಾಡಬೇಕೆಂಬುದೇ ನನ್ನ ಸಲಹೆಯಾಗಿದೆ.

ಮುಂದೆ ಪಾಲಿನೇಷನ್ ಆಗುವಾಗ, ಉತ್ಪಾದನೆಗೆ ಬರತಕ್ಕ ಬೀಜದ ಪೋಲರೈಸೇಷನ್ ಆದರೆ ಅದರಲ್ಲಿ ಯೀಲ್ಡ್ ಕಡಿಮೆಯಾಗುವ ಸಂಭವವಿರುತ್ತದೆ. ಪೋಲರೈಸೇಷನ್ ತಪ್ಪಿಸಬೇಕಾದರೆ ನಿರ್ಬಂಧ ಹಾಕಬೇಕಾದ್ದು ಬಹಳ ಮುಖ್ಯ ವಾದುದು. ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಇದರ ಬಗ್ಗೆ ಗಮನ ಕೊಟ್ಟು ಯಾರ ಒತ್ತಡಕ್ಕೂ ಒಳಗಾಗದೆ ಆ ನಿಯಮಗಳನ್ನು ಪರಿಪಾಲಿಸಿದರೆ ಉತ್ತಮವಾದ ಕೆಲಸವಾಗುತ್ತದೆ. ನಾಲ್ಕೈದು ವರ್ಷಗಳ ಹಿಂದೆ ಅನೇಕ ಜನ ರೈತರಿಗೆ ಹೈ ಯೀಲ್ಡಿಂಗ್ ವೆರೈಟಿ ಜೋಳವನ್ನು ಬಿತ್ತನೆ ಬೀಜ ಬೆಳೆಯುವುದಕ್ಕೆ ಕೊಟ್ಟರು. ಹಾಗೆ ಬಿತ್ತನೆ ಬೀಜವನ್ನು ಬೆಳೆದಾಗ ಸುಮಾರು ೧೫೦ ಗಜ ಫಾಸಲೆಯಲ್ಲಿ ಬೇರೆ ತರಹ ಲೋಕಲ್ ಜೋಳವನ್ನು ಬೆಳೆಯಬಾರದು ಎಂದು ಇದೆ. ಅಂಥ ಸಂದರ್ಭದಲ್ಲಿ ಅನೇಕ ಜನ ರೈತರು ಈ ನಿಯಮಿತವಾದ ಫಾಸಲೆಯೊಳಗೇ ಲೋಕಲ್ ವೆರೈಟಿ ಜೋಳವನ್ನು ಹಾಕಿ, ಹೈ ಯೀಲ್ಡಿಂಗ್ ವೆರೈಟಿ ಹಾಕಿರತಕ್ಕವರ ಹತ್ತಿರ ಹೋಗಿ ಜಾಸ್ತಿ ದುಡ್ಡು ಡಿಮಾಂಡ್ ಮಾಡಿ ಅಷ್ಟು ದುಡ್ಡು ಕೊಟ್ಟರೆ ಲೋಕಲ್ ವೆರೈಟಿ ತೆಗೆಯುತ್ತೇನೆ ಇಲ್ಲವಾದರೆ ಇಲ್ಲ ಎಂದು ದುಡ್ಡು ವಸೂಲ ಮಾಡಿರತಕ್ಕ ಅನೇಕ ನಿದರ್ಶನಗಳಿವೆ. ಎಷ್ಟೋ ಸಂದರ್ಭಗಳಲ್ಲಿ ಹೈ ಯೀಲ್ಡಿಂಗ್ ವೆರೈಟಿ ಹಾಕಿರತಕ್ಕ ರೈತ ಅಜೂಬಾಜು ಇರತಕ್ಕ ರೈತರಿಗೆ ದುಡ್ಡು ಕೊಡದೆ ಹೋಗಿ, ಲೋಕಲ್ ವೆರೈಟಿ ಜೋಳ ಪಕ್ಕದಲ್ಲಿ ಬಿತ್ತನೆಯಾಗಿದ್ದ ಕಾರಣದಿಂದ ಹೈ ಯೀಲ್ಡಿಂಗ್ ವೆರೈಟಿ ಬೀಜ ವನ್ನು ರಿಜೆಕ್ಟ್ ಮಾಡಿರುವ ನಿದರ್ಶನಗಳೂ ಇವೆ. ಆದ್ದರಿಂದ ಕೆಲವು ನಿರ್ಬಂಧ ಗಳನ್ನು ಹಾಕಿರುವುದು ಒಳ್ಳೆಯದು. ಆದರೆ ಅಧಿಕಾರಿಗಳು ಯಾವ ವಿಧವಾದ ಒತ್ತಡಕ್ಕೂ ಒಳಗಾಗದೆ ಅದನ್ನು ಪರಿಪಾಲಿಸಿಕೊಂಡು ಬರಬೇಕು. ಮತ್ತು ಯಾರು

ಈ ನಿರ್ಬಂಧಗಳನ್ನು ಉಲ್ಲಂಘನೆ ಮಾಡುತ್ತಾರೆಯೋ ಅವರಿಗೆ ಇದರಲ್ಲಿ ಸೂಚಿತ ವಾಗಿರುವಂತೆ ಶಿಕ್ಷೆಗೆ ಗುರಿಪಡಿಸಬೇಕು.

ಹಾರ್ಟಿಕಲ್ಚರಲ್ ಇಲಾಖೆ ಸೀಡ್ ಫಾರಂಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ಆಲೂ ಗಡ್ಡೆ ೫೦ ಸಹಸ್ರ ಎಕರೆಯಲ್ಲಿ ಬೆಳೆಯಾಗುತ್ತಿದೆ. ಆದರೆ ಸೇಕಡ ೧೦ರಷ್ಟು ಕೂಡ ಒಳ್ಳೆಯ ಬಿತ್ತನೆ ಬೀಜ ಸಿಕ್ಕುತ್ತಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಸೀಡ್ ಬೋರನ್ ಡಿಸೀಸ್ ಇದ್ದು ಅಂಥ ಬೀಜದಿಂದ ರೈತನು ಹಾಳಾಗಿರತಕ್ಕ ಉದಾಹರಣೆಗಳು ಬೇಕಾದಷ್ಟಿವೆ. ಆ ದೃಷ್ಟಿಯಿಂದ ಸೀಡ್ ಫಾರಂಗಳನ್ನು ಹೆಚ್ಚು ಸಂಖ್ಯೆಯಲ್ಲಿ ಮಾಡಬೇಕು ಎನ್ನುವ ಯಾವ ಸದುದ್ದೇಶದಿಂದ ಈ ಮಸೂದೆಯನ್ನು ಸರ್ಕಾರ ತಂದಿದೆಯೋ, ಮತ್ತು ಅದರಲ್ಲಿ ಯಾವ ಯಾವ ನಿಬಂಧನೆಗಳನ್ನು ಹಾಕಿದೆಯೋ ಅವುಗಳನ್ನು ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸುವಂತೆ ಆಗಬೇಕು.

ಹಾಸನ ತಾಲ್ಲೂಕು ಸೋಮನಹಳ್ಳಿಯಲ್ಲಿ ಸರ್ಕಾರದ ಒಂದು ಆಲೂಗಡ್ಡೆಯ ಸೀಡ್ ಫಾರಂ ಇದ್ದು ಅದಕ್ಕೆ ಲಕ್ಷಾಂತರ ರೂಪಾಯಿ ಸರ್ಕಾರ ಇನ್‌ವೆಸ್ಟ್ ಮಾಡಿದೆ ಆದರೆ ನನಗೆ ತಿಳಿದು ಬಂದಿರುವ ಪ್ರಕಾರ ಯಾವ ಘನ ಉದ್ದೇಶದಿಂದ ಸರ್ಕಾರದವರು ಆ ಸೀಡ್ ಫಾರಂ ಮಾಡಿದ್ದಾರೆಯೋ ಆ ಉದ್ದೇಶ ಈಡೇರದೆ ಅದರಿಂದ ಪ್ರಯೋಜನ ಸರ್ಕಾರಕ್ಕೆ ಆಗಲೀ ದೇಶದ ರೈತರಿಗಾಗಲೀ ದೊರೆಯುತ್ತಿಲ್ಲ. ಇದು ಮಾನ್ಯ ಸಚಿವರಿಗೂ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ರೈತರು ದೂರು ಕೊಟ್ಟಿದ್ದರೂ ಕೂಡ ಮಾನ್ಯ ಸಚಿವರು ಅತ್ತಕಡೆ ಗಮನ ಹರಿಸಿಲ್ಲ. ಅಲ್ಲಿ ಒಬ್ಬ ಅಧಿಕಾರಿ ಇದ್ದಾನೆ. ಒಬ್ಬ ಸ್ಪ್ರೇ ಅಟೆಂಡರ್ ಆಗಿ ಸೇರಿಕೊಂಡಿದ್ದು ಈಗ ದೊಡ್ಡ ಅಧಿಕಾರಿಯಾಗಿದ್ದಾನೆ. ಆತ ಹಗಲು ದರೋಡೆ ಮಾಡುತ್ತಿದ್ದು ದುರ್ವ್ಯವಹಾರ ನಡೆಯುತ್ತಿದೆ. ರೈತನಿಗೆ ಸರಿಯಾದ ಬೀಜ ದೊರೆಯುತ್ತಿಲ್ಲ. ಮೂರು ನಾಲ್ಕು ತಿಂಗಳ ಹಿಂದೆ ಆತನಿಗೆ ಬೇರೆ ಕಡೆಗೆ ವರ್ಗವಾಗಿತ್ತು ಆತ ಪುನಃ ಅಲ್ಲಿಗೇ ರಾಜಕೀಯ ಒತ್ತಡವನ್ನು ಉಪಯೋಗಮಾಡಿ ಬಂದಿದ್ದಾನೆ. ಇಂಥ ಅಧಿಕಾರಿಗಳನ್ನು ಬೇರೆ ಎಲ್ಲಿಯಾದರೂ ಹಾಕಿ, ನಿಸ್ಪೃಹರಾಗಿರತಕ್ಕ, ರೈತರ ಬಗ್ಗೆ ಅನುಕಂಪವಿರತಕ್ಕ, ಕೈಬಾಯಿ ಶುದ್ಧವಾಗಿರತಕ್ಕ ಅಧಿಕಾರಿಗಳನ್ನು ಅಂಥ ಸೀಡ್ ಫಾರಂಗಳಿಗೆ ಹಾಕದೆ ಹೋದರೆ ಯಾವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ, ದುಡ್ಡು ಮಾತ್ರ ವ್ಯಯವಾಗುತ್ತದೆ.

ಚಿಕ್ಕಬಳ್ಳಾಪುರ ಭಾಗದಲ್ಲಿ ಕೆಲವರು ಬಿತ್ತನೆ ಬೀಜವನ್ನು ಬೆಳೆಯುತ್ತಾರೆ ಮತ್ತು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಅವರಿಗೆ ಎಷ್ಟು ಖರ್ಚು ಬೀಳುತ್ತದೆ ಮತ್ತು ಸರ್ಕಾರದ ಸೀಡ್ ಫಾರಂನಲ್ಲಿ ಅನೇಕ ಜನ ಅಧಿಕಾರಿಗಳನ್ನು ಇಟ್ಟುಕೊಂಡು ಬೀಜವನ್ನು ತಯಾರು ಮಾಡುತ್ತಿರುವ ಕಡೆ ಎಷ್ಟು ಖರ್ಚು ಬೀಳುತ್ತದೆ? ಸರ್ಕಾರದ ಸೀಡ್ ಫಾರಂನಲ್ಲಿ ಅವ್ಯವಸ್ಥೆಯಾಗಿ ಸಾವಿರಾರು ಜನ ಹಾಳಾಗಿರುತ್ತಾರೆ. ಜನ

ತಮ್ಮ ಬೆವರು ಸುರಿಸಿ ಕಷ್ಟಪಟ್ಟು ದುಡಿದು ಕೊಡುವ ದುಡ್ಡನ್ನು ಈ ರೀತಿ ವ್ಯಯ ಮಾಡಬಾರದು. ಬೇಕಾದವರಿಗೆಲ್ಲ ದೊಡ್ಡ ಹುದ್ದೆಗಳನ್ನು ಕೊಡುವುದಕ್ಕೆ ಹೋಗ ಬಾರದು.

ವರ್ಷಕ್ಕೆ ಇಷ್ಟು ಖರ್ಚು ಮಾಡುತ್ತಿರುವಾಗ ಅಲ್ಲಿ ಉತ್ಪತ್ತಿಯಾದ ಬೀಜವೆಷ್ಟು ಮತ್ತು ಅದರ ಬೆಲೆ ಎಷ್ಟು ಬೇರೆ ಕಡೆ ಬೆಳೆದಿರುವುದರ ಬೆಲೆ ಎಷ್ಟು ಎನ್ನುವುದನ್ನು ಒಂದಕ್ಕೊಂದನ್ನು ಹೋಲಿಸಿ ನೋಡಬೇಕು. ಅನೇಕ ವಿಧವಾದ ಅವ್ಯವಹಾರಗಳು ಹಾಸನ ತಾಲ್ಲೂಕಿನಲ್ಲಿರುವ ಆಲೂಗಡ್ಡೆ ಸೀಡ್ ಫಾರಂನಲ್ಲಿ ನಡೆದಿವೆ ಮತ್ತು ಹಣ ದುರ್ವ್ಯಯವಾಗಿದೆ. ಆದ್ದರಿಂದ ಸೀಡ್ ಫಾರಂಗಳನ್ನು ಮಾಡುವಾಗ, ಅವು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕಾದರೆ ದಕ್ಷರಾದ ಮತ್ತು ನಿಸ್ಪೃಹರಾದ, ಜನಗಳಬಗ್ಗೆ ಅನುಕಂಪವಿಟ್ಟುಕೊಂಡು ದೇಶದಜನ ಕೊಟ್ಟ ದುಡ್ಡಿನಲ್ಲಿ ಸಂಬಳ ತೆಗೆದುಕೊಳ್ಳುವುದ ರಿಂದ ತಮ್ಮ ಸೇವೆ ಅವರಿಗೆ ದೊರೆಯಬೇಕು ಎನ್ನುವ ದೃಷ್ಟಿಯಿಂದ ಇರತಕ್ಕ ಮೇಧಾವಿಗಳನ್ನು ಹಾಕಬೇಕು. ಈಗ ಹಾಸನದಲ್ಲಿರುವಂಥ ಅಧಿಕಾರಿಗಳನ್ನು ಹಾಕಿ ಜನರ ಶಾಪಕ್ಕೆ ಮಾನ್ಯಮಂತ್ರಿಗಳು ಗುರಿಯಾಗಬಾರದು ಎಂದು ಹೇಳುತ್ತೇನೆ.

ಪ್ರೋಲರೈಸೇಷನ್ ಸಂಬಂಧದಲ್ಲಿ ಏನಾದರೂ ತಪ್ಪು ಆಗಿದ್ದರೆ ಅಂಥವರಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆಗೆ ಗುರಿಪಡಿಸುವುದಕ್ಕೆ ಮಸೂದೆಯಲ್ಲಿ ಅವಕಾಶವಿದೆ. ಆದರೆ ಇಲಾಖೆಯ ಮೂಲಕ ತಯಾರು ಮಾಡಿ ಕೊಡುವ ಬೀಜದಲ್ಲಿ ಏನಾದರೂ ದೋಷಗಳಿದ್ದರೆ ಸಂಬಂಧಪಟ್ಟ ಅಧಿಕಾರಿಯಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇದರಲ್ಲಿ ಏನೂ ಅಳವಡಿಸಿಲ್ಲ. ಖಚಿತವಾಗಿ ಯಾರೇ ತಪ್ಪು ಮಾಡಲಿ, ಯಾವ ಅಧಿಕಾರಿಯ ಕಾಲದಲ್ಲಿ ಅಂಥ ಕೆಟ್ಟ ಬೀಜ ಉತ್ಪಾದನೆಯಾಯಿತೋ ಅಂಥವರಮೇಲೆ ರೈತರಿಂದ ದೂರುಗಳು ಬಂದಾಗ ಸೂಕ್ತವಾದ ಕ್ರಮ ತೆಗೆದುಕೊಂಡು ಶಿಕ್ಷೆಗೆ ಒಳಪಡಿಸತಕ್ಕ ಕಾರ್ಯಕ್ರಮವನ್ನು ದಿಟ್ಟತನದಿಂದ ತೆಗೆದುಕೊಳ್ಳಬೇಕು. ಯಾವದೇ ರಾಜಕೀಯ ಒತ್ತಡಕ್ಕೂ ಮಣಿಯಬಾರದು. ಒಂದು ಸಲ ಆರ್ಡರ ಮಾಡಿದಮೇಲೆ ಪುನಃ ಅದನ್ನು ಯಾವುದೇ ಕಾರಣದಮೇಲೆ ಬದಲಾವಣೆ ಮಾಡಬಾರದು. ಸೀಡ್ ಫಾರಂ ಉತ್ತಮವಾಗಿ ಕೆಲಸಮಾಡಿ ಅದರಿಂದ ರೈತರಿಗೆ ಉತ್ತಮ ಬೀಜ ದೊರೆಯ ಬೇಕು ಎನ್ನುವುದು ಸರ್ಕಾರದ ಗಮನದಲ್ಲಿ ಇರಬೇಕು.

ಅನೇಕ ಜನ ರೈತರು ತೆಂಗು ಮತ್ತು ಮಾವು ಸಸಿಗಳನ್ನು ತಯಾರುಮಾಡಿ ಹಂಚಿಕೆ ಮಾಡುತ್ತಿದ್ದಾರೆ. ಅವರು ಆ ರೀತಿ ಮಾಡಕೂಡದು ಎನ್ನುವ ಪ್ರತಿಬಂಧಕ ಈ ಮಸೂದೆಯಲ್ಲಿ ಇದ್ದಹಾಗೆ ಕಾಣುವುದಿಲ್ಲ. ಯಾವ ಒಂದು ಏರಿಯಾ ಎಂದು ಒಳಪಡಿಸಿರುತ್ತಾರೆ ಅಷ್ಟರೊಳಗೆ ಮಾತ್ರ ಮಾಡಬಾರದು ಉಳಿದಕಡೆ ಮಾಡಬಹುದು ಎಂದು ಕಾಣುತ್ತದೆ. ಒಳ್ಳೆಯ ಬೀಜವನ್ನು ರೈತ ಕೊಟ್ಟರೆ ಅದು ಸ್ವಾಗತಾರ್ಹ. ಎಷ್ಟೋ ಸಂದರ್ಭಗಳಲ್ಲಿ ನೂರಕ್ಕೆ ನೂರೂ ಒಳ್ಳೆಯ ಬೀಜವಿರುವುದಿಲ್ಲ. ಕೆಟ್ಟ ಬೀಜವನ್ನೂ ಬೇರೆಯವರು ಕೊಡುತ್ತಾರೆ. ಅಂಥ ಸಂದರ್ಭಗಳಲ್ಲಿ ಕ್ರಮ ತೆಗೆದು ಕೊಳ್ಳಲು ಸೀಡ್ ಆಕ್ಟ್ ಜಾರಿಯಲ್ಲಿದೆ ಎಂದು ತಿಳಿಯುತ್ತೇನೆ. ದೋಷಪೂರಿತವಾದ

ಬೀಜಗಳನ್ನು ಕೊಡುವಂಥ ರೈತರಮೇಲೆ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ವ್ಯವಸ್ಥೆ ಇರಬೇಕು ಎಂದು ನಾನು ಹೇಳುತ್ತೇನೆ.

ಸೆಕ್ಷನ್ 4ರಲ್ಲಿ

"Prohibition of cultivation of crop plants.—(1) No person shall in a controlled area cultivate any kind of crop plant, the cultivation of which has been prohibited in such area under section 3."

ಎಂದು ಹೇಳಿದೆ. ಈ ಕ್ಲಾಸನ್ನು ಇಟ್ಟುಕೊಂಡು ಕೆಲವು ಸಂದರ್ಭಗಳಲ್ಲಿ ಕಿರುಕುಳ ಕೊಡಬಹುದು. ಉತ್ತಮವಾದ ತಳಿಗಳನ್ನು ಉತ್ಪಾದನೆ ಮಾಡುವುದಕ್ಕೆ ನಾವು ಅಡ್ಡಿ ತರುವುದಿಲ್ಲವೆಂದು ಮಾನ್ಯ ಚನ್ನಬಸಪ್ಪನವರು ಸ್ಪಷ್ಟವಾಗಿ ನಮಗೆ ಆಶ್ವಾಸನೆ ಕೊಟ್ಟರು. ಅದೇ ರೀತಿಯ ಆಶ್ವಾಸನೆ ತಮ್ಮ ಬಾಯಿಯಲ್ಲಿಯೂ ಬರಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಕ್ಷನ್ ೧೧ ರಲ್ಲಿ "Special Provision in respect of Elite Coconut Seed Farm at Kannamangala."

ಎಂದು ಇದೆ. ಕೆಲವು ಸಂದರ್ಭದಲ್ಲಿ ಉತ್ತಮವಾದ ಜಾಗಗಳಲ್ಲಿ ಉತ್ತಮವಾದ ತೆಂಗಿನ ಸಸಿಗಳು ಬರುತ್ತವೆ. ಆದರೆ ಅನೇಕ ಸಂದರ್ಭಗಳಲ್ಲಿ ಏನಾಗುತ್ತದೆಂದರೆ, ರೈತರು ಸರಿಯಾದಂಥ ಸಸಿಗಳನ್ನು ಹಾಕದೆ ನಷ್ಟಕ್ಕೆ ಒಳಗಾಗುತ್ತಾರೆ. ಇದಕ್ಕೆ ಕಾರಣ ಅವರಿಗೆ ಸರಿಯಾದ ಸಸಿಗಳು ದೊರೆಯದೇ ಇರುವುದು. ರೈತರು ಇಂದು ಉತ್ಸಾಹಶಾಲಿಗಳಾಗಿರುವುದರಿಂದ ಅವರಿಗೆ ಒಳ್ಳೆಯ ಸಶಿಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ ಮಾನ್ಯ ಸಿದ್ದಪ್ಪನವರು ಹೇಳಿದಂತೆ, ಸರಿಯಾದ ಶಿಸ್ತು, ನಿಯಮಗಳನ್ನು ಅನುಸರಿಸುವಂತಹ ಅಧಿಕಾರಿಗಳನ್ನು ತಾವು ತಯಾರು ಮಾಡಬೇಕು. ಒಳ್ಳೆಯ ಬೀಜಗಳನ್ನು ಉತ್ಪಾದನೆ ಮಾಡತಕ್ಕಂಥ ಅಧಿಕಾರಿಗಳನ್ನು ತಯಾರು ಮಾಡಬೇಕು. ಅನಂತರ ಇದನ್ನು ಜಾರಿಗೆ ತರಬೇಕು. ಈ ಬಿಲ್ಲಿನ ಉದ್ದೇಶದ ಬಗ್ಗೆ ನನ್ನ ವಿರೋಧವಿಲ್ಲ. ಆದರೆ ಖಾಸಗಿಯಾಗಿ ಯಾರು ಉತ್ತಮವಾದಂಥ ಕೆಲಸ ಮಾಡುತ್ತಿದ್ದಾರೋ ಅಂತಹವರ ಕೆಲಸಕ್ಕೆ ಮೊಟಕು ಮಾಡಬೇಡಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) — ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂದಿರತಕ್ಕ ಮೈಸೂರು ಸೀಡ್ ಫಾರಮ್ಸ್ ಬಿಲ್ ಏನಿದೆ, ಇದನ್ನು ಅವರು ಯಾವ ಉದ್ದೇಶದಿಂದ ತಂದಿದ್ದಾರೋ ಆ ಉದ್ದೇಶ ಸಫಲವಾಗುವುದಾಗರೆ ಈ ಬಿಲ್‌ನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಕಾರಣ ಇಷ್ಟೆ; ಸರಿಯಾದ ಉತ್ಪತ್ತಿ ಬರತಕ್ಕಂಥ ಒಳ್ಳೆಯ ಬೀಜ ರೈತನಿಗೆ ಹಂಚಿಕೆಯಾಗದೆ ಅನೇಕ ಜನ ರೈತರು ಬೆಳೆಯನ್ನು ಕಳೆದುಕೊಂಡು ಅನೇಕ ವಿಧವಾದ ತೊಂದರೆಗೀಡಾಗಿದ್ದಾರೆ.

ಮುಖ್ಯವಾಗಿ ಒಳ್ಳೆಯ ಉತ್ಪಾದನೆ ಬರತಕ್ಕಂಥ ಮತ್ತು ಒಳ್ಳೆಯ ಗುಣ ಇರುವಂತಹ ಬೀಜಗಳನ್ನು ಒದಗಿಸಬೇಕು. ಮತ್ತು ರೋಗ ಇಲ್ಲದಿರತಕ್ಕಂಥ ಉತ್ತಮವಾದ ತಳಿ ಬೀಜಗಳನ್ನು ಉತ್ಪಾದನೆಮಾಡಿ ರೈತರಿಗೆ ಒದಗಿಸುವುದು ಬಹು ಪ್ರಾಮುಖ್ಯವಾದ ವಿಚಾರ. ಈ ಬಿಲ್‌ನಲ್ಲಿ ಅಡಕವಾಗಿರತಕ್ಕಂಥ ಅನೇಕ ನಿಬಂಧನೆಗಳು ಸ್ವಾಗತಾರ್ಹ ವಾಗಿವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಒಳ್ಳೆಯ ಬೀಜಗಳನ್ನು ಉತ್ಪಾದನೆಮಾಡಿ ರೈತರಿಗೆ ಕೊಡಬೇಕಾದರೆ ಕೆಲವೊಂದು ನಿರ್ಬಂಧ ಹಾಕಬೇಕಾದುದು ಮುಖ್ಯವಾದ ವಿಚಾರ.

ಇನ್ನೊಂದು ವಿಚಾರ. ಈ ಸೀಡ್ಸ್‌ಗಳಿಂದ ಆಲುಗಡ್ಡೆ ಆಗಲೀ ಅಥವಾ ಬೇರೆ ಸೀಡ್ಸ್‌ಗಳನ್ನು ಉತ್ಪಾದನೆ ಮಾಡುವಾಗ ಬಹಳ ಜನ ರೈತರ ದೂರು ಏನೆಂದರೆ ಜಾಸ್ತಿ ಕೆಮಿಕಲ್ ಮೆನ್ಯೂರ್ ಹಾಕಿ ಬೆಳೆದು ಬಿಡುತ್ತೇವೆ. ಸೀಡ್ಸ್ ರೈತರಿಗೆ ಕೊಡುವಾಗ ನಿರೀಕ್ಷಿಸಿದ ಮಟ್ಟದಲ್ಲಿ ಬೆಳೆ ಕೊಡುವುದಿಲ್ಲ ಎಂಬ ದೂರು ಹೇಳುತ್ತಾರೆ. ಇಂಥ ಕೆಮಿಕಲ್ ಮ್ಯೆನ್ಯೂರ್ಸ್ ಪ್ರಾಹಿಬಿಟ್ ಮಾಡಬೇಕು.

ಉಪಾಧ್ಯಕ್ಷರು.— ಫರ್ಟಿಲೈಜರ್ಸ್ ಕೆಮಿಕಲ್ ಮ್ಯೆನ್ಯೂರ್ಸ್ ಇದರಲ್ಲಿ ಬರುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.— ಒಳ್ಳೆಯ ಬೀಜ ಉತ್ಪಾದನೆ ಮಾಡುವಾಗ ಬಹಳ ಮುಖ್ಯವಾಗಿ ದೋಷರಹಿತವಾದ ಬೀಜಕೊಡಿ, ಒಳ್ಳೆಯ ಬೀಜ ಉತ್ಪಾದನೆ ಮಾಡುವಾಗ ಇದು ಬಹಳ ಮುಖ್ಯ ಎಂದು ಅನ್ನಿಸುತ್ತದೆ. ಈ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಮಾನ್ಯ ಸಚಿವರನ್ನು ವಿನಯದಿಂದ ಭಿನ್ನವಿಸಿ ಕೊಳ್ಳುತ್ತೇನೆ. ಸೀಡ್ ಆಕ್ಟ್ ತಂದಿದ್ದೀರಿ, ಬಹಳ ಒಳ್ಳೆಯ ಉದ್ದೇಶ ಇದರಲ್ಲಿದೆ, ಇದರ ಉದ್ದೇಶ ಕಾರ್ಯಗತ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಯಾವ ವಿಧವಾದ ದಾಕ್ಷಿಣ್ಯಕ್ಕೆ ಮಣಿಯದೇ ಸೀಡ್‌ಫಾರಂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು, ಒಳ್ಳೆಯಬೀಜ ರೈತರಿಗೆ ವಿತರಣೆ ಮಾಡಬೇಕು. ಈ ಬಗ್ಗೆ ತಪ್ಪಿಸ್ಥರು ರೈತರು ಆಗಿರಬಹುದು, ಅಧಿಕಾರಿಗಳು ಆಗಿರಬಹುದು, ಯಾರೇ ಆಗಿರಲಿ ಅವರ ಮೇಲೆ ದಯಾದಾಕ್ಷಿಣ್ಯವಿಲ್ಲದೆ ಕ್ರಮ ಕೈಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ವೈ. ಪಾಟೀಲ (ಸಿಂದ್ಗಿ).—ಸಭಾಧ್ಯಕ್ಷರೇ, ಸೀಡ್ ಫಾರ್ಮ್ರಿಂಸ್ ಬಿಲ್ಲು ಅತ್ಯಂತ ಸ್ವಾಗತಾರ್ಹವಾಗಿದೆ. ಅದರ ಪರಿಣಾಮ ಏನು ಆಗುತ್ತದೆ ಎನ್ನುವು ದರ ವಿಷಯ ನಮ್ಮ ಮುಂದಿನ ಬಡ್ಜೆಟ್ ಕಾಲಕ್ಕೆ ಮಾತನಾಡಬೇಕಾಗುತ್ತದೆ. ತಾವು ಮೆಜಾರಿಟಿ ಪಾರ್ಟಿ ಗೌವರ್ನ್ಮೆಂಟ ಇರುವುದರಿಂದ ಮುಂದೆ ರೂಲ್ಸ ಏನು ಫ್ರೇಂ ಮಾಡುತ್ತೀರಿ ಆ ರೂಲ್ಸ ಪಾಸ ಆಗುತ್ತದೆ. ತಾವು ಮೆಜಾರಿಟಿ ಇರುವುದರಿಂದ, ನೀವೇ ಬ್ರಹ್ಮ, ವಿಷ್ಣು, ಮಹೇಶ್ವರರು ಎಲ್ಲವೂ ಆಗಿರುತ್ತೀರಿ. ಸರ್ಕಾರದ ಮೇಲೆ ವಿಶ್ವಾಸವಿಟ್ಟು ಚೊಲೋದು ಮಾಡುತ್ತಾರೆಂಬ ದೃಷ್ಟಿಯಿಂದ ಪಾಸ್ ಮಾಡಲಿಕ್ಕೆ

ಅನುಮತಿಯನ್ನು ಕೊಡುತ್ತೀನೆ. ಒಂದು ಮಾತನ್ನು ನಮ್ರತೆಯಿಂದ ಸೂಚನೆ ಮಾಡುತ್ತೀನೆ. ಸರ್ಕಾರದ ಫಾರಂನಲ್ಲಿ ಏನು ದೋಷವಿದೆ ಖಾಸಗಿ ಜನರಲ್ಲಿ ಏನು ದೋಷವಿದೆ ಎನ್ನುವ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೀನೆ. ಖಾಸಗಿ ಜನರಿಗೆ ಸೈನ್ಸ ಪ್ರಜ್ಞೆ ಇರುವುದಿಲ್ಲ. ಮಾನ್ಯ ಸಿದ್ದಪ್ಪನವರು ಹೇಳಿದಹಾಗೆ ಸರ್ಕಾರದಲ್ಲಿ ಹಣ ಇರುವುದರಿಂದ, ಅವರಿಗೆ ಸ್ವಂತ ಆಸಕ್ತಿ ಇರುವುದಿಲ್ಲ. ಮಾರೇ ಗೌಡರು ರಿಟೈರ್ ಆದರೆ ಅಂಥ ಜನರ ಸೇವೆ ರೈತರಿಗೆ ಸಿಗುವಂತೆ ಮಾಡಬೇಕು. ಖಾಸಗಿ ಜನರಿಗೆ ಸಬ್ಸಿಡಿ ಕೊಟ್ಟು ಲೋನ್ ಕೊಟ್ಟು ಪ್ರೋತ್ಸಾಹ ಮಾಡಿದರೆ ಸರ್ಕಾರ ತಪ್ಪು ಮಾಡಿದೆ ಎನ್ನುವ ಬಗ್ಗೆ ಟೀಕೆಗೆ ಒಳಗಾಗುವುದಿಲ್ಲ. ಮಂಜುನಾಥ ಮತ್ತಿತರ ಕೆಲವು ಸ್ನೇಹಿತರು ಹೇಳಿದಂತೆ ಸತ್ಯಾಂಶ ಒಂದು ವ್ಯಕ್ತಿಗೆ ಜೀವನದಲ್ಲಿ ತಪ್ಪು ಮಾಡಿದರೆ ಸಮಾಜದಲ್ಲಿ ಆತನ ಮೇಲೆ ದೋಷಾರೋಪಣೆ ಮಾಡುತ್ತಾರೆ. ಅಧಿಕಾರಿಗಳ ಮೇಲೆ ಬರುವುದಿಲ್ಲ.

ಖಾಸಗೀ ಜನರು ಯಾರಾದರೂ ಡಿಗ್ರಿ ತೆಗೆದುಕೊಂಡವರು, ಬೀಜ ಉತ್ಪಾದನೆ ಮಾಡುವುದಕ್ಕೆ ಸಾಲದ ರೂಪದಲ್ಲಿ ಅಥವಾ ಸಬ್ಸಿಡಿ ರೂಪದಲ್ಲಿ ಸರ್ಕಾರ ಅವರಿಗೆ ಪ್ರೋತ್ಸಾಹ ಕೊಡಬೇಕು. ಸರ್ಕಾರ ಈ ಸೀಡ್ ಫಾರಂನಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕಿಂತ ಖಾಸಗಿ ಜನರಿಗೆ ಪ್ರೋತ್ಸಾಹ ಕೊಟ್ಟರೆ ಅದರಿಂದ ಲಾಭವಾಗುತ್ತದೆ ಎನ್ನುವ ದೃಷ್ಟಿಯಿಂದ ವಿಚಾರ ಮಾಡಬೇಕು. ಯಾರಾದರೂ ಇಂಥ ಸೀಡ್ ಫಾರಂ ತೆಗೆಯುತ್ತೀವೆಂದು ಮುಂದೆ ಬಂದರೆ ಅವರಿಗೆ ಸರ್ಕಾರ ಹಣ ಸಹಾಯ ಮಾಡಿದರೆ ಅವರು ಮುಂದೆ ಬರುತ್ತಾರೆ. ಮಾನ್ಯ ಶ್ರೀ ಭಂಗಿಯವರು ಸಲಹೆ ಮಾಡಿದರು ಹಾರ್ಟಿಕಲ್ಚರಲ ಸೀಡ್‌ಫಾರಂ ಮಾಡಿದ ಹಾಗೆ ಉಳಿದ ಎಲ್ಲವಕ್ಕೂ ಅನುಕೂಲವಾಗುವಂಥ ಫಾರಂ ಮಾಡಬೇಕು ಎಂದು ಹೇಳಿದ್ದನ್ನು ನಾನು ಸಮರ್ಥಿಸುತ್ತೀನೆ.

ಸಿದ್ದಪ್ಪನವರು ಹೇಳಿಪ ಹಾಗೆ ತೆಂಗು ಮತ್ತು ಮಾವು ನೂರಾರು ವರ್ಷಗಳು ಇರುವ ಬೆಳೆ. ಮುಂಬೈ ಕರ್ನಾಟಕದ ಬಿಜಾಪುರ ಜಿಲ್ಲೆಯಲ್ಲಿ ತೆಂಗಿನ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಎನ್ನುವ ತಮ್ಮ ಭಾವನೆ ಇದೆ. ಎಂ. ಎಸ್. ಇ. ಬಿ. ಚೇರ್ಮನ್ ನಾರಾಯಣರಾವ ಅವರ ಮನೆಗೆ ಹೋಗಿದ್ದೆ. ತೆಂಗಿನ ಮರ ಸಣ್ಣದು ಇದ್ದರೂ ಒಳ್ಳೆಯ ಕಾಯಿ ಬಿಡುವಂತೆ ಬೆಳೆದಿದೆ. ಅಂತಹ ರೀತಿಯಲ್ಲಿ ತಜ್ಞರ ಅಭಿಪ್ರಾಯವನ್ನು ಪಡೆದು ಬಿಜಾಪುರ ಜಿಲ್ಲೆಗಳಲ್ಲಿ ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೀನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು)—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಒಂದು ಕಾಯಿದೆ ನಮ್ಮ ದೇಶದಲ್ಲಿ ಸುಮಾರು ೮೦ ಭಾಗ ವ್ಯವಸಾಯದ ಕಸಬನ್ನೇ ಅವಲಂಬಿಸಿರತಕ್ಕ ರೈತಾಪಿ ಜನಗಳಿಗೆ ಅನುಕೂಲವಾಗುವಂಥ ಒಂದು ಕಾಯಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಬೀಜ ಇಲ್ಲದೆ ಬೆಳೆ ಇಲ್ಲ. ಉತ್ತಮ

ವಾದಂಥ ಬೆಳೆ ಬರಬೇಕಾದರೆ ಶ್ರೇಷ್ಠ ಮಟ್ಟದ ಅತ್ಯಂತ ಹೆಚ್ಚಿನ ಇಳುವರಿಯನ್ನು ಕೊಡತಕ್ಕ ಬೀಜವನ್ನು ರೈತಾಪಿ ಜನಗಳಿಗೆ ಒದಗಿಸಿಕೊಡಬೇಕಾದ್ದು ಸರ್ಕಾರ ಬಹಳ ಮುಖ್ಯವಾದ ಕರ್ತವ್ಯ. ನನಗಾದರೂ ಅನ್ನಿಸುತ್ತದೆ, ಅಧ್ಯಕ್ಷರೇ, ಈ ವರ್ಷ ಆಹಾರದ ಬೆಳೆ ಮತ್ತು ಇತರ ಬೆಳೆಗಳು ಕಡಿಮೆಯಾಗಿರುವುದಕ್ಕೆ ಮೂಲ ಕಾರಣ ದೋಷಪೂರಿತವಾದಂಥ ಬೀಜಗಳು. ಅನೇಕ ವಿಧವಾದಂಥ ಬೆಳೆಗಳಿಗೆ ದೋಷಪೂರಿತವಾದಂಥ ಬೀಜಗಳನ್ನು ಕೊಟ್ಟಿರುವುದರಿಂದ ಬಹುಶ: ನಮ್ಮ ದೇಶದಲ್ಲಿ ಆಹಾರದ ಬೆಳೆ ಇಳಿತವಾಗಿದೆ ಎಂದು ನನ್ನ ಭಾವನೆ. ತಮಗೆ ಗೊತ್ತಿರುವ ಹಾಗೆ ಈ ಬೀಜವನ್ನು ಉತ್ತಮ ಪಡಿಸುವಂಥ ಸ್ಥಿತಿಯಲ್ಲಿ ನಮ್ಮ ವ್ಯವಸಾಯದ ಪರಿಣಿತರು, ತಜ್ಞರು ಸಾಕಷ್ಟು ಇದರ ಬಗ್ಗೆ ರಿಸರ್ಚ್ ಮಾಡುತ್ತಿದ್ದಾರೆ, ಮಾಡಿದ್ದಾರೆ. ಅದರ ಬಗ್ಗೆ ನನ್ನ ಅಭಿನಂದನೆ ಇದೆ.

ನಾವು ನೋಡಿದ ಹಾಗೆ ಪ್ರತಿಯೊಬ್ಬ ರೈತನು ತನ್ನಲ್ಲಿರತಕ್ಕ ಜಮೀನಿನಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಬೇಕು, ಆಹಾರದ ಅಭಾವವನ್ನು ನೀಗಬೇಕು ಎಂದು ಆಶೆ ಇಟ್ಟುಕೊಂಡಿರತಕ್ಕ ಕಾಲದಲ್ಲಿ ಈ ಮಹತ್ತರವಾದ ಜವಾಬ್ದಾರಿಯನ್ನು ಹೊತ್ತಿರತಕ್ಕ ಅಧಿಕಾರಿಗಳು ಮತ್ತು ಸರ್ಕಾರದ ಯಂತ್ರ ತನ್ನ ಕರ್ತವ್ಯವನ್ನು ಬಹಳ ಚೆನ್ನಾಗಿ ನಿರ್ವಹಣ ಮಾಡುವುದು ಬಹಳ ಮುಖ್ಯವಾದುದು.

4.00 P. M.

ಇದರ ಬಗ್ಗೆ ಎಲ್ಲಾ ಸದಸ್ಯರು ಕಳಕಳಿಯಿಂದ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಬಹುಶ: ಅಧ್ಯಕ್ಷರೇ, ನಾನು ತೆಂಗನ್ನು ಬೆಳೆಯುವ ಕ್ಷೇತ್ರದಿಂದ ಬಂದಿರುವುದರಿಂದ, ಅದರ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಟ್ಟು, ಮಂತ್ರಿಗಳ ಗಮನವನ್ನು ಸೆಳೆಯಲು ಅಪೇಕ್ಷೆ ಪಡುತ್ತೇನೆ. ತೆಂಗಿನ ಬೆಳೆ, ರಾಗಿ ಬೆಳೆ, ಅಥವಾ ಭತ್ತದ ಬೆಳೆಯಂತೆ ಅಲ್ಲ. ಅದು ರೈತರ ಬಾಳಿನ ಒಂದು ಪ್ರಶ್ನೆ; ಜೀವನದ ಒಂದು ಪ್ರಶ್ನೆ. ಈ ರೀತಿ ಇರಬೇಕಾದರೆ ರೈತನ ಒಂದು ಬೆಳೆಯನ್ನು ಸರಿಯಾದ ರೀತಿಯಲ್ಲಿ, ಜವಾಬ್ದಾರಿಯುತವಾದ ರೀತಿಯಲ್ಲಿ ನೋಡಿಕೊಳ್ಳಬೇಕಾದುದು ಸಂಬಂಧಪಟ್ಟ ಸರ್ಕಾರದ ಇಲಾಖೆಯ ಮುಖ್ಯ ಕರ್ತವ್ಯ. ಆದರೆ ಒಂದು ಮಾತನ್ನು ತಮ್ಮ ಮುಂದೆ ನಾನು ಒತ್ತಿ ಒತ್ತಿ ಹೇಳುವುದೇನಂದರೆ, ತೆಂಗಿನ ಬೆಳೆ ಬೀಜವನ್ನು ಹಾಕಿದ ಮೇಲೆ ೧೦ ವರ್ಷ ಆದ ನಂತರ ರೈತ ಅದರಿಂದ ಫಲವನ್ನು ತೆಗೆದುಕೊಳ್ಳತಕ್ಕ ಮಟ್ಟಕ್ಕೆ ಬರುತ್ತಾನೆ. ಈ ೧೦ ವರ್ಷಗಳ ಅಂತರದಲ್ಲಿ ಅವನು ಎಷ್ಟು ಹಣವನ್ನು ಖರ್ಚು ಮಾಡಿರುತ್ತಾನೆ, ಎಷ್ಟು ದಿನಗಳನ್ನು ಕಳೆದಿರುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ನಮ್ಮ ಭಾಗದಲ್ಲಿ ತೆಂಗಿನ ಬೆಳೆ ಕೇವಲ ಮಳೆಯ ನೀರಿನ ಆಧಾರದ ಮೇಲೆ ಬೆಳೆಯತಕ್ಕ ಬೆಳೆ. ನೀರಾವರಿಯಿಂದ ಅಥವಾ ಭಾವಿಯಿಂದ ನೀರು ತೆಗೆದು ಬೆಳೆಯುವ ಅವಕಾಶ ನಮ್ಮ ಕಡೆ ಇಲ್ಲ. ಏನಿದ್ದರೂ ಪ್ರಕೃತಿದತ್ತವಾದ ಮಳೆಯ ಆಧಾರದಿಂದ ಬೆಳೆಯತಕ್ಕ ಇಂತಹ ಬೆಳೆಗಳಿಗೆ ಯಾವ ಮಟ್ಟದ ಬೀಜಗಳನ್ನು ಒದ

ಗಿಸಬೇಕು ಎಂದು ನೋಡಬೇಕು. ನನ್ನ ಅನುಭವದಿಂದ ಹೇಳುವುದಾದರೆ, ಅರ್ಹ ವಾಗಿಲ್ಲದ ಬೀಜವನ್ನು ಯಾರು ತಂದು ಹಾಕಿದ್ದರೂ ಅದರಿಂದ ೨೫ ವರ್ಷಗಳಾದರೂ ಉತ್ತಮವಾದ ಫಲ ಪಡೆದಿಲ್ಲ ಎಂಬುದನ್ನು ಕಣ್ಣಾರೆ ನೋಡಿದ್ದೇನೆ. ಆದರೂ ನಿಮ್ಮ ಅಧಿಕಾರಿಗಳು ಯಾವುದು ಬೀಜಕ್ಕೆ ಅರ್ಹವಾಗಿಲ್ಲ ಅಂತಹ ಬೀಜಗಳನ್ನು ತೆಗೆದು ಕೊಂಡು ಬಂದು ಹಾಕುತ್ತಾರೆ. ಇದು ಸರಿಯಾದ ಕ್ರಮವಲ್ಲ. ತೆಂಗಿನ ಬೆಳೆಗೆ ಬೀಜವನ್ನು ಸಂಗ್ರಹಿಸಬೇಕಾದರೆ ಅಕ್ಟೋಬರ್, ನವಂಬರ್, ಡಿಸೆಂಬರ್ ತಿಂಗಳಿನಲ್ಲಿ ಸಂಗ್ರಹಿಸಬೇಕು. ಮತ್ತು ೬೦ ವರ್ಷಗಳಾಗಿರತಕ್ಕ ಮರದಿಂದ ಸಂಗ್ರಹಿಸಬೇಕು. ತೆಂಗಿನ ಬೀಜವನ್ನು ೬೦ ವರ್ಷಗಳ ಮೇಲ್ಪಟ್ಟು ಇರತಕ್ಕ ಮರದಿಂದ ಸಂಗ್ರಹಿಸ ಬೇಕು ಎನ್ನುವ ತಿದ್ದುಪಡಿ ತಾವು ಮಾಡಬೇಕು. ಅದರಲ್ಲೂ ಸಹ ಬೀಜವನ್ನು ಸಂಗ್ರಹಿಸಬೇಕಾದರೆ ಅಕ್ಟೋಬರ್, ನವಂಬರ್, ಡಿಸೆಂಬರ್ ಮತ್ತು ಜನವರಿ ಈ ೪ ತಿಂಗಳಲ್ಲಿ ಬರತಕ್ಕ ತೆಂಗಿನಕಾಯಿ ಏನು ಇದೆ, ಇದರಲ್ಲಿ ನೀರಿನ ಅಂಶ ಕಡಿಮೆ ಇರುತ್ತದೆ. ಯಾವುದರಲ್ಲಿ ನೀರಿನ ಅಂಶ ಕಡಿಮೆ ಇರುತ್ತದೆ, ಅವುಗಳನ್ನು ಕಿತ್ತು ಒಂದು ತಿಂಗಳು ಇಟ್ಟು, ನೀರಿನ ಅಂಶ ಕಡಿಮೆ ಆದ ಮೇಲೆ ಭೂಮಿಯಲ್ಲಿ ಒಂದು ಒಂದೂವರೆ ಅಡಿ ಅಂತರದಲ್ಲಿ ಇಟ್ಟು ಸಸಿಯನ್ನು ಮಾಡತಕ್ಕ ವಿಧಾನವನ್ನು ಹಳ್ಳಿಯ ರೈತರು ತಮ್ಮ ಇಲಾಖೆಗಿಂತ ಚೆನ್ನಾಗಿ ಕಲತಿದ್ದಾರೆ. ಒಂದು ವಿಷಯ ವನ್ನು ಮುಖ್ಯವಾಗಿ ಹೇಳುತ್ತೇನೆ. ಖಾಸಗಿ ಉದ್ಯಮದಲ್ಲಿ, ಖಾಸಗಿ ಕ್ಷೇತ್ರದಲ್ಲಿ ಸಾಕಷ್ಟು ಪ್ರೋತ್ಸಾಹ ಕೊಡದೇ ಹೋದ ಪಕ್ಷದಲ್ಲಿ ಇದರಿಂದ ರೈತರಿಗೆ ತೊಂದರೆ ಕಟ್ಟಿಟ್ಟದ್ದು ಎಂದು ತಮ್ಮ ಮುಂದೆ ನಿವೇದನೆ ಮಾಡುತ್ತೇನೆ. ನಮ್ಮ ದೇಶಕ್ಕೆ ಬೇಕಾದಂಥ ಎಲ್ಲಾ ತರಹದ ಬೀಜಗಳನ್ನು, ಎಲ್ಲಾ ತರಹದ ಹಣ್ಣಿನ ಗಿಡದ ಸಸಿ ಗಳನ್ನು ಕೊಡತಕ್ಕ ಸಾಮರ್ಥ್ಯ ನಿಮಗೆ ಇದೆಯೋ ಎನ್ನುವ ಪ್ರಶ್ನೆ ಕೇಳುವಾಗ ನಿಮಗೇ ಅರ್ಥವಾಗುತ್ತದೆ.

ಉಪಾಧ್ಯಕ್ಷರು.—ತಾವು ಇದನ್ನೆಲ್ಲಾ ಇಲ್ಲಿ ಹೇಳಿದರೆ ಹೇಗೆ ? Though the scope is limited, all matters connected with agriculture and horticulture are just pushed here,

ಶ್ರೀ ಟಿ. ಎಂ. ಮಂಜುನಾಥ.—ನಿರ್ದಿಷ್ಟವಾಗಿ ತೋಟಗಾರಿಕೆ ಇಲಾಖೆ ಹೆಚ್ಚಾಗಿ ಉತ್ಪಾದನೆ ಮಾಡತಕ್ಕ ಬೀಜಗಳನ್ನು ಸಪ್ಲೈ ಮಾಡುವುದು ಗೊತ್ತಿದೆ. ಆದರೆ ಆ ದಿಶೆಯಲ್ಲಿ ಮಾಡಬೇಕಾದ ಕಾರ್ಯ ಕುಂಠಿತವಾಗಿದೆ, ಲೋಪವಾಗಿದೆ. ಅದನ್ನು ಎತ್ತಿ ಹಿಡಿಯುವುದು ನನ್ನ ಕರ್ತವ್ಯ ಎಂದು ತಿಳಿದು ಹೇಳುತ್ತಿದ್ದೇನೆ. ತೆಂಗಿನ ವ್ಯವಸಾಯ ನಮ್ಮ ದೇಶದ ತೆಂಗು ಬೆಳೆಗಾರರ ಜೀವನದ ಪ್ರಶ್ನೆ ಆಗಿದೆ. ಸರ್ಕಾರ ಇದರ ಬಗ್ಗೆ ಗಮನಕೊಡಬೇಕಾದುದು ಮುಖ್ಯ. ಅವರು ನೋಟಿ ಫಿಕೇಷನ್ ಮಾಡಬೇಕು ಎಂದು ಹೊರಟಿದ್ದಾರೆ. ರಾಗಿ ಬೀಜ, ಭತ್ತದ ಬೀಜ ತಯಾರು ಮಾಡುವುದಕ್ಕೆ, ಭೂಮಿಯ ಮೇಲೆ ದುಂಬಿ ಹುಳುಗಳಿಂದ ಪಾಲನೇಷನ್ ಆಗುವುದರಿಂದ ಅದಕ್ಕೆ ತಕ್ಕಷ್ಟು ಏರಿಯಾ ಬೇಕು. ತೆಂಗಿನ ಬೀಜದ ಸಸಿಯನ್ನು

ಉತ್ಪಾದನೆ ಮಾಡುವುದಕ್ಕೆ ಏರಿಯಾ ನೋಟಿಫಿಕೇಷನ್ ಆಗಬೇಕಾಗಿಲ್ಲ. ಮಂತ್ರಿಗಳು ಇದಕ್ಕೆ ಸಮರ್ಥನೆ ಕೊಡಬೇಕು. ಸರ್ಕಾರಿ ಕ್ಷೇತ್ರದಲ್ಲಿ ತಯಾರು ಮಾಡಿದ್ದಕ್ಕಿಂತ, ಖಾಸಗೀ ಕ್ಷೇತ್ರದಲ್ಲಿ ತಯಾರು ಮಾಡಿದ ಸಸಿಗಳು ಬಹಳ ಚೆನ್ನಾಗಿ ಬಂದಿವೆ. ಆದುದರಿಂದ ಅನೇಕ ಕಡೆಗಳಿಂದ ಹೆಚ್ಚಿಗೆ ಜನ ಬರುತ್ತಾರೆ. ಯಾರು ತೆಂಗಿನ ಬೆಳೆಯುವ ಜನ ಬರುತ್ತಾರೆ ಅವರು ತೋಟಗಾರಿಕೆ ಇಲಾಖೆಗೆ ಹೋಗುತ್ತಾರೆ, ನೋಡುತ್ತಾರೆ ಸಸಿಗಳನ್ನು ನೋಡಿ ಇದು ಹೆಚ್ಚಿಗೆ ಬೆಳೆ ಕೊಡುತ್ತದೆಯೇ ಎಂಬ ಅನುಮಾನ ಅವರಿಗೆ ಆಗಲೇ ಹುಟ್ಟುತ್ತದೆ. ಖಾಸಗೀ ಕ್ಷೇತ್ರದಲ್ಲಿ ಪೈಪೋಟಿ ಇದೆ. ತೋಟಗಾರಿಕೆ ಇಲಾಖೆ ೨–೨೦, ೧–೨೦ಕ್ಕೆ ಒಂದು ವರ್ಷದ ಸಸಿ ಕೊಡಬಹುದು. ೩ ವರ್ಷದ ಸಸಿಗೆ ಖಾಸಗಿ ಕ್ಷೇತ್ರದಲ್ಲಿ ೧೦ ರಿಂದ ೧೨ ರೂಪಾಯಿಯ ವರೆಗೆ ದುಬಾರಿ ಹಣ ಕೊಟ್ಟು ತೆಗೆದುಕೊಳ್ಳುವುದು ಗೊತ್ತಿದೆ.

ಉಪಾಧ್ಯಕ್ಷರು.—ಅದೆಲ್ಲಾ ಈ ಕಾಯಿದೆಯಲ್ಲಿ ಬರುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ತೆಂಗಿನ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ಇರತಕ್ಕ ನೋಟಿಫಿಕೇಷನ್ ದಯವಿಟ್ಟು ಪರಿಶೀಲನೆಮಾಡಿ ನೋಟಿಫೈಡ್ ಏರಿಯಾ ಎಂದು ಇರುವುದನ್ನು ತೆಗೆಯಬೇಕು. ಬೀಜಗಳನ್ನು ಉತ್ಪಾದನೆ ಮಾಡುವ ಕಾರ್ಯದಲ್ಲಿ ಖಾಸಗೀ ವ್ಯಕ್ತಿಗಳಿಗೂ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಶಿದ್ದಪ್ಪ (ಬಿಳಿಗೆರೆ).— ಸನ್ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಅಪೇಕ್ಷೆ ಪಡುತ್ತೇನೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಆಹಾರ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ. ಎಲ್ಲಿ ನೋಡಿದರೂ ಅಕ್ಕಿ, ರಾಗಿ, ಗೋದಿ ಕೊಡಿಸಿ ಎಂದು ಎಲ್ಲಾ ಕಡೆ ಬೇಡಿಕೆ ಇದೆ. ಇದಕ್ಕೆ ನಿಜವಾದ ಕಾರಣವೇನೆಂದರೆ, ಮಿಶ್ರಾಹಾರ ಜಾಸ್ತಿ ಉಪಯೋಗಿಸುತ್ತಾ ಇಲ್ಲ. ನಾವು ಬೆಳಿಗ್ಗೆ ರಾತ್ರಿ ಯಾವಾಗಲೂ ಊಟಕ್ಕೆ ಅಕ್ಕಿ, ರಾಗಿ, ಜೋಳ ಉಪಯೋಗಿಸುತ್ತೇವೆ. ಅದನ್ನು ಬಿಟ್ಟು ಬದಲಾವಣೆ ಮಾಡಿ, ನಮ್ಮ ಆಹಾರ ಪದಾರ್ಥಗಳಲ್ಲಿ ಸ್ವಲ್ಪ ಹಣ್ಣು ಹಂಪಲು ಉಪಯೋಗಿಸಿದರೆ ನಿಜವಾಗಿ ಆಹಾರ ಸಮಸ್ಯೆ ಕಡಿಮೆಯಾಗುತ್ತದೆ ಎಂದು ನನ್ನ ಅಭಿಪ್ರಾಯ. ನಮ್ಮ ಜಿಲ್ಲೆಯಲ್ಲಿ ಎಷ್ಟೇ ಜಾಗಾ ಇದ್ದರೂ ಕೂಡ ತರಕಾರಿ ಬೆಳೆಯಬೇಕು, ಹಣ್ಣು ಹಂಪಲು ತೋಟ ಬೆಳೆಸಬೇಕು ಎಂಬ ಅಭಿಪ್ರಾಯ ಜನಗಳಿಗೆ ಇಲ್ಲ. ಸಾಕಷ್ಟು ತಿಳುವಳಿಕೆ ಇಲ್ಲ. ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಡ ಸಿಡ್ ಫಾರ್ಮ್ಸ ತೋಟಗಾರಿಕೆ ವಿಷಯವಾಗಿ, ಹಣ್ಣು ಹಂಪಲು ಬೆಳೆಸುವವಿಷಯದಲ್ಲಿ ಫಾರಂನ್ನು ಏರ್ಪಾಡುಮಾಡಿ ರೈತರಿಗೆ ಟ್ರೈನಿಂಗ ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಎಷ್ಟು ಜಾಗಾ ಇದ್ದರೂ ಬೀಳು ಬಿದ್ದಿರುತ್ತದೆ. ರಾಗಿ, ಜೋಳ, ಭತ್ತ ಎಲ್ಲಾ ಜಮೀನುಗಳಲ್ಲಿ ಬೆಳೆಯುವುದಿಲ್ಲ. ಅಂಥ ಬೀಳು ಬಿದ್ದಿರತಕ್ಕ ಜಮೀನಿನಲ್ಲಿ ಮಾವಿನ ತೋಟ, ಹಣ್ಣುಗಳ ತೋಪು ಎಬ್ಬಿಸಬಹುದು. ರೈತರಿಗೆ

ತೋಟನಮಾಡಬೇಕು ಎನ್ನುವ ಅಭಿಪ್ರಾಯ ಬಂದಿಲ್ಲ. ಬರೀ ಭತ್ತ, ರಾಗಿ ಬೆಳೆಯ ಬೇಕು ಎನ್ನುವ ದೃಷ್ಟಿ ಇಟ್ಟುಕೊಂಡಿರುತ್ತಾರೆ. ಸರಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿ ಸೀಡ್ ಫಾರ್ಮ್ಸ್ ಮಾಡಿ ತರಕಾರಿ ಹೇಗೆ ಬೆಳೆಯಬೇಕು. ಹೇಗೆ ಮಾಡ ಬೇಕು ಎಂಬುದನ್ನು ತೋರಿಸಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ನಮ್ಮ ತಾಲ್ಲೂಕಿನಲ್ಲಿ ನಂಜನಗೂಡಿನ ರಸಬಾಳೆ ಎಂದರೆ ಬಹಳ ಹೆಸರುವಾಸಿಯಾದುದು. ಅದು ಇಂದು ಕನಸಾಗಿದೆ. ನಂಜನಗೂಡು ರಸಬಾಳೆ ಎಂದರೆ ಈಗ ಯಾವು ದನ್ನೋ ಕೊಡುತ್ತಾರೆ. ಆದರೂ ಕೂಡ ರಸಬಾಳೆಗೆ ಫಾರಿನ್ ಎಕ್ಸ್‌ಚೇಂಜ್ ಸಿಗು ತ್ತಿದೆ. ನಮ್ಮ ಸ್ನೇಹಿತರು ಹೇಳಿದರು, ೨೦ ಗುಂಟೆಯಲ್ಲಿ ಟೊಮೇಟೋಗೆ ೪೦೦೦ ರೂಪಾಯಿ ಸಿಕ್ಕಿತು ಎಂದು. ಇದನ್ನು ರೈತರಿಗೆ ಹೇಳಿದರೆ ನಗುತ್ತಾರೆ. ಇಷ್ಟೊಂದು ಉತ್ಪತ್ತಿ ಇದೆಯೇ ಎಂದು ನಗುತ್ತಾರೆ ಪ್ರತಿಯೊಂದು ತರಕಾರಿ ಬೆಳೆಯುವ ವಿಷಯದಲ್ಲಿ, ತೋಟಗಾರಿಕೆ ಮಾಡುವ ವಿಷಯದಲ್ಲಿ ಟ್ರೈನಿಂಗ ಕೊಟ್ಟು, ಪ್ರೋತ್ಸಾಹ ಕೊಡಬೇಕು. ಆದುದರಿಂದ ಇಷ್ಟು ಅಡಿ ದೂರದಲ್ಲಿ ಕಾಮನ್ ಸೀಡ್ಸ್ ಬೆಳೆಯಬಾರದು ಎನ್ನುವ ನಿಯಮ ಇದ್ದರೂ ಕೂಡ ನಾವು ಹೈಬ್ರಿಡ್ ಸೀಡ್ ಫಾರಂ ಮಾಡಬೇಕು. ನಮ್ಮ ಭಾಗದಲ್ಲಿ ಇದನ್ನು ಬೆಳೆಯುವುದನ್ನು ಅನೇಕಸಾರಿ ನೋಡಿದ್ದೇನೆ.

† ಶ್ರೀ ಕೆ. ಹೆಚ್. ಪಾಟೀಲ — ಸನ್ಮಾನ್ಯ ಉಪಸಭಾಪತಿಗಳೇ, ಇಲ್ಲಿಯ ವರೆಗೂ ಬಹಳಷ್ಟು ಜನ ಮಾತನಾಡಿದ್ದಾರೆ. ಈ ಬಿಲ್ಲು ಬಹಳ ಸಣ್ಣದಾದರೂ ಕೂಡ ಇದು ಅತ್ಯಂತ ಮಹತ್ವವಾದ ಬಿಲ್ಲು ಎಂದು ಏನು ಮಾತನಾಡಿದರೋ ಅವರೆಲ್ಲರ ಮಾತನ್ನೂ ಬಹಳ ಕೂಲಂಕೃಷವಾಗಿ ಕೇಳಿದ್ದೇನೆ ಮತ್ತು ಅವರು ಅನೇಕ ಉಪಯುಕ್ತ ವಾದ ಸಲಹೆಗಳನ್ನೂ ಕೂಡ ಮಾಡಿದ್ದಾರೆ. ಕೆಲವರು ಈ ಬಿಲ್ಲಿನಿಂದ ವ್ಯವಸಾಯಗಾರರಿಗೆ ಎಲ್ಲಿ ತೊಂದರೆಯಾಗುತ್ತದೋ ಎನ್ನುವ ಭಯವನ್ನು ವ್ಯಕ್ತ ಮಾಡಿದ್ದಾರೆ. ಅದೇ ರೀತಿ ಕೆಲವು ಮಾನ್ಯ ಸದಸ್ಯರು ಬೆಂಗಳೂರಿನಲ್ಲಿರುವ ನರ್ಸರಿ ಯವರಿಗೆ ಇದರಿಂದ ಏನಾದರೂ ಭಯ ಆದೀತು ಎನ್ನುವ ಮಾತನ್ನೂ ಸಹ ವ್ಯಕ್ತ ಮಾಡಿದ್ದಾರೆ. ಈ ಬಿಲ್ಲಿನ ಮೂಲ ಉದ್ದೇಶ ಏನೆಂದರೆ ವ್ಯವಸಾಯಗಾರರಿಗೆ ಹೆಚ್ಚು ಅನುಕೂಲತೆಯನ್ನು ಮಾಡಿಕೊಡಬೇಕು ಮತ್ತು ಹೆಚ್ಚು ಉಪಯುಕ್ತವಾದಂಥ ಉತ್ತಮ ತರಗತಿಯ ಬೀಜಗಳನ್ನು ಪುರವಟಿ ಮಾಡಿಕೊಡಬೇಕು ಎಂದು ಹೀಗೆ ಈ ಬೀಜಗಳನ್ನು ಪುರವಟಿ ಮಾಡುವಾಗ ಯಾವ ರೀತಿಯಲ್ಲಿ ಅವರ ಬೆಳವಣಿಗೆ ಅಭಿವೃದ್ಧಿ ಆಗಬೇಕು ಮತ್ತು ಅವರ ಬಗ್ಗೆ ಯಾವ ರೀತಿಯಲ್ಲಿ ತಾಂತ್ರಿಕ ಸಲಹೆಗಳು ಬರುತ್ತದೋ ಅದಕ್ಕನುಗುಣವಾದ ರೀತಿಯಲ್ಲಿ ಈ ಫಾರಂಗಳನ್ನು ಸ್ಥಾಪನೆ ಮಾಡ ಬೇಕು ಎನ್ನುವುದೇ ಇದರ ಉದ್ದೇಶ. ಮತ್ತು ಈ ಸದನದ ಮುಂದೆ ವ್ಯವಸಾಯ ಗಾರರ ಬಗ್ಗೆ ತಮಗೆ ಒಂದು ಆಶ್ವಾಸನೆಯನ್ನು ಕೊಡಲಿಚ್ಛಿಸುತ್ತೇನೆ. ಅದೇನೆಂದರೆ ರೈತರಿಗೆ ತೊಂದರೆಯಾಗುವಂಥ ರೀತಿಯಲ್ಲಿ ಈ ಬಿಲ್ಲನ್ನು ಯಾವ ರೀತಿಯಾಗಿಯೂ

ಸರಕಾರ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು. ಆದರೆ ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಮೈಸೂರು ರಾಜ್ಯದಲ್ಲಿ ನೈಸರ್ಗಿಕ ಸಂಪತ್ತು ವಿಫಲವಾಗಿದ್ದರೂ ಕೂಡ ಅನೇಕ ಸಂದರ್ಭಗಳಲ್ಲಿ ಉಳಿಕೆ ರಾಜ್ಯಗಳನ್ನು ತುಲನ ಮಾಡಿ ನೋಡಿದರೆ ನಮ್ಮ ರಾಜ್ಯದಲ್ಲಿ ಪ್ರತಿಯೊಂದರಲ್ಲೂ ಕೂಡ ವ್ಯವಸಾಯಗಾರನ ಹುಟ್ಟುವಳಿ ಉಳಿಕೆ ರಾಜ್ಯಗಳ ಹುಟ್ಟುವಳಿಗಿಂತಲೂ ಪ್ರಗತಿ ಕಾಣಲಾಗಿದೆ. ಹೀಗಿದ್ದರೂ ಕೂಡ ನಾವು ಉತ್ತಮವಾದ ಬೀಜಕ್ಕೆ ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನವರಿಗೆ ಕೈಒಡ್ಡುವ ಪರಿಸ್ಥಿತಿ ಬಂದಿದೆ. ಇದನ್ನು ನಿಲ್ಲಿಸಬೇಕೆಂದೂ ಮತ್ತು ಎಲ್ಲಾ ಕಡೆಯೂ ಈ ಬಗ್ಗೆ ಸೀಡ್ಸ್ ಫಾರಂಸ್‌ನ್ನು ಬೆಳೆಸಬೇಕೆಂತಲೂ ಈ ಬಿಲ್ಲಿನ ಮೂಲ ಉದ್ದೇಶ. ಆದರೂ ಸಹ ಕೆಲವು ಸದಸ್ಯರು ಕೇಳಿದರು. ಇದು ಹಾರ್ಟಿಕಲ್‌ಚರ್‌ಗೆ ಸಂಬಂಧಪಟ್ಟ ಬಿಲ್ ಆದರೂ ಸಹ ಇದು ವ್ಯವಸಾಯ ಖಾತೆಯಲ್ಲಿ ಏತಕ್ಕೆ ಬರಲಿಲ್ಲಾ ಎನ್ನುವ ಶಂಕೆಯನ್ನು ವ್ಯಕ್ತಮಾಡಿದ್ದಾರೆ. ಈ ಬಗ್ಗೆ ಹೇಳುವುದಾದರೆ ವ್ಯವಸಾಯ ಖಾತೆಯಲ್ಲಿ ಈಗಾಗಲೇ ಸೀಡ್ ಆಕ್ಟ್ ಅನುಲಿನಲ್ಲಿ ಇದೆ. ಮತ್ತು ಬೆಳೆಗಾರನ ಮೇಲೆ ಹಾಗೂ ರೈತರ ಮೇಲೆ ಇನ್ನೂ ಒಂದು ಹೆಚ್ಚಿನ ಹತೋಟಿ ಹಾಕಬೇಕು ಎನ್ನುವ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದೇವೆ. ಅಗ್ರಿಕಲ್ಚರಲ್ ಫಾರಂ ಈಗಾಗಲೇ ಸಾಕಷ್ಟು ಬೆಳೆದಿವೆ. ಆದರೆ ಹಾರ್ಟಿಕಲ್‌ಚರಲ್‌ನಲ್ಲಿ ಕೇವಲ ಹಣ್ಣು ವ್ಯಾಪ್ತಿ ಮಾತ್ರ ಬೆಳೆದಿದೆಯೋ ಹೊರತು ಬೇರೆ ಯಾವುದೂ ಬೆಳೆದಿಲ್ಲ. ಆದುದರಿಂದ ಈ ಹಾರ್ಟಿಕಲ್‌ಚರಗೆ ಸಂಬಂಧಪಟ್ಟ ಸೀಡ್ಸ್‌ನ್ನು ತಯಾರು ಮಾಡುವುದಕ್ಕೆ ಯಾವ ಯಾವ ತಾಲ್ಲೂಕಿನಲ್ಲಿ ಅಗತ್ಯವಿದೆಯೋ ಅಲ್ಲಿ ಈ ಸೀಡ್ಸ್ ಫಾರಂನ್ನು ತೆಗೆಯುವುದಕ್ಕೆ ಈ ಬಿಲ್ಲಿನಿಂದ ಅನುಕೂಲವಾಗುತ್ತದೆ.

ಈಗ ಒಂದು ಉದಾಹರಣೆ ಹೇಳುವುದಾದರೆ ಪೊಟಿಟೋ ಸೀಡ್ಸ್‌ನ್ನು ಪರದೇಶದಿಂದ ತರಿಸಿ ಹಂಚುವ ವ್ಯವಸ್ಥೆಯಲ್ಲಿದ್ದೇವೆ. ಇವೆಲ್ಲಾ ಅರ್ಥಮಾಡಿಕೊಂಡು ಉತ್ತಮವಾದ ತರಗತಿ ಬೀಜವನ್ನು ಇಲ್ಲೇ ತಯಾರು ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ಮಾನ್ಯ ಸದಸ್ಯರು ಈ ಸಂಗತಿಯನ್ನು ಹೆಚ್ಚು ಅರ್ಥ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಈ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಇನ್ನು ಕೆಲವರು ಇದನ್ನು ಆತುರಾತುರವಾಗಿ ತೀವ್ರಗತಿಯಿಂದ ಈ ಬಿಲ್ಲನ್ನು ತಂದಿದ್ದಾರೆ ಎಂದು ಹೇಳಿದರು. ಇದನ್ನು ಪೂರ್ವದೃಷ್ಟಿಯಿಂದ ಅವರು ಈ ರೀತಿ ವಾದ ಮಾಡಿರಬಹುದು. ಆದರೆ ಅವರು ಪೂರ್ವದೃಷ್ಟಿಯಿಂದವಾದ ಮಾಡಿದರೂ ಸಹ ಮತ್ತು ಅವರು ಈ ಬಗ್ಗೆ ಟೀಕೆ ಮಾಡಿದ್ದರೂ ಸಹ ಅವೆಲ್ಲವನ್ನೂ ಸ್ವಾಗತ ಮಾಡುತ್ತೇವೆ. ಏತಕ್ಕೆಂದರೆ ಟೀಕೆ ಇಲ್ಲದೆ ಯಾವ ಸುಧಾರಣೆಯೂ ಆಗುವುದಕ್ಕೆ ಸಾಧ್ಯವಿಲ್ಲಾ, ಎಂದು ನನ್ನ ಭಾವನೆ. ಮತ್ತು ಈ ಬಗ್ಗೆ ಸರಕಾರದ ಒಂದು ಅಮೆಂಡ್‌ಮೆಂಟ್ ತರುವುದು ಅವಶ್ಯಕ ಎಂದು ನನ್ನ ಭಾವನೆ. ಈ ತರಹ ಫಾರಂಗಳನ್ನು ತೆರೆಯುವುದಕ್ಕೆ ಕೇವಲ ಸರಕಾರ ತೆರೆಯುವುದೇ ಅಲ್ಲದೆ ವ್ಯಕ್ತಿಗತವಾಗಿಯೂ ಕೂಡ ತೆರೆಯುವುದಕ್ಕೆ ಅವಕಾಶ ಇರಬೇಕು ಎಂದು ಈ ವಿಷಯದಲ್ಲಿ ಮಾನ್ಯ

ಸದಸ್ಯರುಗಳು ಹೇಳಿದಂಥ ಉಪಯುಕ್ತವಾದ ಸಲಹೆಗಳನ್ನು ಗಮನಿಸಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ, ರೈತರಿಗೆ ಆಗಲಿ ಅಥವಾ ಬೆಳೆಗಾರರಿಗೇ ಆಗಲಿ ಅನ್ಯಾಯವಾಗದೇ ಇರುವ ದೃಷ್ಟಿಯಿಂದ ಈ ಬಿಲ್ಲನ್ನು ಚಾಚೂ ತಪ್ಪದೆ ನಡೆಸುತ್ತೇವೆ ಎಂದು ಹೇಳುತ್ತೇನೆ. ತೆಂಗಿನ ಗಿಡಗಳಿಗೇ ಆಗಲಿ, ಅಡಿಕೆ ಗಿಡಗಳಿಗೇ ಆಗಲಿ ಯಾವುದಕ್ಕೆ ಕಾಯಿದೆ ಅವಶ್ಯಕತೆ ಇದೆಯೋ ಅದಕ್ಕೆ ಮಾಡೋಣ. ಈಗ ಪೊಟೊಟೋ ಫಾರಂನ್ನು ಹಾಸನದಲ್ಲಿ ಮಾಡಬೇಕು ಎಂದು ಬರೆದಿದಾರೆ. ಆ ಬಗ್ಗೆ ಹಾರ್ಟಿಕಲ್‌ಚರ್ ಡಿಪಾರ್ಟಿಮೆಂಟ್‌ಗೆ ಹೇಳಿದ್ದೇವೆ. ಅಲ್ಲಿ ಒಂದು ಫಾರಂನ್ನು ಮಾಡುತ್ತಾರೆ. ಇವಕ್ಕೆಲ್ಲಾ ಅನ್ವಯವಾಗಿ ಇದನ್ನು ಕಾರ್ಯಗತ ಮಾಡುವುದ ಕ್ಕೋಸ್ಕರ ಈ ಒಂದು ಮಸೂದೆಯನ್ನು ತಂದಿದ್ದೇವೆ. ಆದುದರಿಂಧ ಈ ಮಸೂದೆಗೆ ಎಲ್ಲರೂ ಬೆಂಬಲ ಕೊಡಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ

ಇನ್ನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈಗತಾನೇ ಇಲ್ಲಿ ಬಂದರು. ಅವರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸೆಕ್ಶನ್ ಇಕ್ಕೆ ಈ ಒಂದು ಅಮೆಂಡ್ ಮೆಂಟನ್ನು ಸರಕಾರ ತಂದಿದೆ.

ಶ್ರೀ ಹೆಚ್. ಎಸ್. ಸಿದ್ಧಪ್ಪ.— ಸ್ವಾರ್ಥ ಅಧಿಕಾರಿಗಳ ಬಗ್ಗೆ ಏನು ಮಾಡ್ತೀರಿ ಎಂದು ಏನೂ ಹೇಳಲಿಲ್ಲಾ.

ಶ್ರೀ ಕೆ. ಹೆಚ್. ಪಾಟೀಲ.— ಈ ಬಿಲ್ಲನ್ನು ಟೀಕೆ ಮಾಡುವಾಗ ಅಥವಾ ಸಲಹೆ ಕೊಡುವಾಗ ಈ ಬಿಲ್ಲಿನಲ್ಲಿರತಕ್ಕಂಥ ಕೆಲವು ನ್ಯೂನತೆಗಳನ್ನು ಮಾನ್ಯ ಸದಸ್ಯರುಗಳು ನನ್ನ ಗಮನಕ್ಕೆ ತಂದಿದ್ದಾರೆ. ಅದೇ ರೀತಿ ಶ್ರೀಮಾನ್ ಹೆಚ್. ಎಸ್. ಸಿದ್ದಪ್ಪನವರು ಮಾತನಾಡುವಾಗ ಈ ಬಗ್ಗೆ ಏನು ಉಗ್ರವಾದ ಟೀಕೆಗಳನ್ನು ಮಾಡಿದ್ದಾರೋ ಅದನ್ನೂ ಗಮನದಲ್ಲಿಟ್ಟುಕೊಂಡು ಮತ್ತು ಶ್ರೀಮಾನ್ ಕೆ. ಹೆಚ್. ಹನುಮೇಗೌಡರು ಅರಸೀಕೆರೆ ಫಾರಂ ಬಗ್ಗೆ ಏನು ಹೇಳಿದ್ದಾರೋ ಅದನ್ನೂ ಗಮನ ದಲ್ಲಿಟ್ಟುಕೊಂಡಿದ್ದೇನೆ. ಮತ್ತು ಆ ಬಗ್ಗೆ ಕೆಲವು ಮಾಹಿತಿಗಳನ್ನು ತರಿಸಿದ್ದೇನೆ, ಇನ್ನೂ ಕೆಲವು ಮಾಹಿತಿಗಳನ್ನು ತರಿಸುವುದಕ್ಕೆ ಹತ್ತಿದ್ದೇನೆ. ಈ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ ನಿಮ್ಮ ಸಲಹಾ ಟೀಕೆಗಳೆಲ್ಲಾವನ್ನೂ ಗಮನಿಸಿ ಅದಕ್ಕೆ ಚಾಚೂ ತಪ್ಪದೆ ತೀವ್ರಗತಿಯಿಂದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕಾಗಿ ತಾವು ಈ ಬಿಲ್ಲನ್ನು ಸ್ವಾಗತ ಮಾಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

MR. DEPUTY SPEAKER.— The question is :

"That the Mysore Seed Farms Bill, 1973 be taken into consideration."

The motion was adopted.

Clause–2

Mr. DEPUTY SPEAKER.— The question is :

"That clause 2 do stand part of the Bill".
The motion was adopted.

Clause 2 was added to the Bill.

Clause 3

Mr. DEPUTY SPEAKER.— There is an amendment by the Hon. Minister for Agriculture for clause 3. He may move it.

Sri K. H. PATIL.— Sir, I beg to move:

"That in sub-clause (i) after the words 'in public interest to establish' the words 'either by the State Government or by any person authorised by the State Government' shall be inserted."

Mr. DEPUTY SPAKER.—Amendment moved :

" That in Sub-clause (i) after the words 'in public interest to establish' the words 'either by the State Government or by any person authorised by the State Government' shall be inserted".

ಶ್ರೀ ಕೆ. ಎಚ್. ಪಾಟೀಲ.—ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಬಗ್ಗೆ ಸಲಹೆ ಮಾಡಿದ್ದರ ಮೇಲೆ ಅದಕ್ಕನುಗುಣವಾಗಿಯೇ ಈ ಒಂದು ಅಮೆಂಡ್ ಮೆಂಟ್‌ನ್ನು ಸೆಕ್ಷನ್ ೩ಕ್ಕೆ ತಂದಿದ್ದೇನೆ. ಆದುದರಿಂದ ಈ ಬಗ್ಗೆ ಅವರು ಹೆಚ್ಚು ವ್ಯಾಖ್ಯಾನ ಮಾಡದೇ ಈ ಅಮೆಂಡ್‌ಮೆಂಟ್‌ನ್ನು ಒಪ್ಪುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಇದರಲ್ಲಿ 'any person authorised' ಅಂತ ಇದೆ. ಅದಕ್ಕೆ ಬದಲಾಗಿ 'any individual agriculturist' ಅಂತ ಸೇರಿಸಿ. ಏತಕ್ಕೆಂದರೆ ನಿಮ್ಮ ಹತ್ತಿರ ಲೈಸನ್ಸ್ ತೆಗೆದುಕೊಳ್ಳಬೇಕಾದರೆ ಲಂಚ ರುಷು ವತ್ತಿಗೆ ಕಾರಣವಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್ :— ಈಗ ತಂದಿರ ತಕ್ಕಂಥ ಅಮೆಂಡ್‌ಮೆಂಟ್ ಸರಿಯಾಗಿದೆ. "Any person authorised by State Government" ಇದೇ ಸರಿಯಾಗಿದೆ.

MR. DEPUTY SPEAKER.— The question is :

"In sub-clause (i) after the words 'in public interest to establish' the words 'either by the State Government or by any person authorised by the State Government' shall be inserted."

The amendment was adopted.

MR. DEPUTY SPEAKER : The question is :

'That clause 3, as amended, do stand part of the Bill"

The motion-was adopted.

Clause 3, as amended, was added to the Bill.

Clause 4 to 11

MR. DEPUTY SPEAKER.— The question is :

" That clauses 4 to 11 both inclusive do stand part of the Bill.; "

The motion was adopted.

Clauses 4 to 11 both inclusive were added to the Bill.

Clause I etc.

MR. DEPUTY SPEAKER : The question is :

that Clause 1, The long Title Preamble and the Enacting Formula do stand part of the Bill.

The motion was adopted.

Clause 1, The Long Title, the Preamble and the Enacting Formula were added to the Bill.

Motion to pass.

SRI K. H. PATIL.— Sir, I beg to move :

That the Mysore Seed Farms Bill 1973 as amended be passed.

MR. DEPUTY SPEAKER.— The question is :

that the Mysore Seed Farms Bill 1973 as amended be passed.

The Motion was adopted and the Bill, as amended was passed.